UASB Library
Newspaper Clippings
Saturday 05-11-2022 Pg .1
Jai Kisan

## 2ನೇ ದಿನ ಹರಿದುಬಂದ ಜನಸಾಗರ | ವಿವಿಧ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ಪಡೆದ ಅನ್ನದಾತರು

# ಕೃಷಿಮೇಳದಲ್ಲಿ ₹2.10 ಕೋಟಿ ವಹಿವಾಟು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೃಷಿಗೆ ಬೇಕಾದ ಯಂತ್ರೋಪಕರಣಗಳು, ರೈತರ ಹೊಲಗಳಿಗೆ ಔಷಧ ಸಿಂಪಡಿಸಲು ಸಹಕಾರಿಯಾದ ಡ್ರೋನ್‌ಗಳು, ಕುರಿ ಸಾಕಣೆ, ಕೋಳಿ ಸಾಕಣೆ, ಜನಪದ ಕಲೆಗಳನ್ನು ಬಿಂಬಿಸುವ ಕಲಾವಿದರ ತಂಡ ಜನರನ್ನು ಕೃಷಿಮೇಳಕ್ಕೆ ಕೈಬೀಸಿ ಕರೆಯುತ್ತಿದೆ.

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಲಾಗಿರುವ 4 ದಿನಗಳ ಕೃಷಿ ಮೇಳದ ಎರಡನೇ ದಿನವಾದ ಶುಕ್ರವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೇಳಕ್ಕೆ ಜನಸಾಗರವೇ ಹರಿದುಬಂದಿತ್ತು. ಮೊದಲ ದಿನ ಗುರುವಾರ ಮಳೆಯಿಂದಾಗಿ ಕೊಂಚ ಕಿರಿಕಿರಿ ಅನುಭವಿಸಿದ್ದ ಜನರಿಗೆ ಶುಕ್ರವಾರ ಮಳೆರಾಯ ಕೊಂಚ ಬಿಡುವು ಕೊಟ್ಟಿದ್ದರಿಂದ ಭರ್ಜರಿ ವ್ಯಾಪಾರ ವಹಿವಾಟು ನಡೆಯಿತು. ಸಂಜೆ 4 ಗಂಟೆಯ ವೇಳೆ 10 ನಿಮಿಷಗಳ ಕಾಲ ಮಳೆ ಸುರಿಯಿತಾದರೂ ಇದರ ನಡುವೆಯೂ ಜನರು ವಿವಿಧ ಸ್ಟಾಲ್‌ಗಳಿಗೆ ತೆರಳಿ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.




ಇಡೀ ವಿಶ್ವವೇ ಇಂದು ಡ್ರೋನ್ ತಂತ್ರಜ್ಞಾನದ ಮೊರೆಹೋಗಿದೆ. ಇದರ ಲಾಭ ರೈತರಿಗೂ ಆದರೆ ಅವರ ಶ್ರಮ ಕಡಿಮೆಯಾಗಲಿದೆ. ಇಂಥದೊಂದು ಪ್ರಯತ್ನಕ್ಕೆ ಮಲ್ಟಿಫ್ಲೆಕ್ಸ್ ಡ್ರೋನ್ ಪ್ರೈವೇಟ್ ಲಿ. ಸಂಸ್ಥೆ ಹಾಗೂ ಬೀಗಲ್ ಅಗ್ರಿಟೆಕ್ ಸಂಸ್ಥೆ ಮುಂದಾಗಿದೆ. ಈ ಸಂಸ್ಥೆಯು ವಿದೇಶಗಳಿಂದ ಆಮದು ಮಾಡಿರುವ ಡ್ರೋನ್‌ಗಳು ಕೃಷಿಭೂಮಿಗೆ ಔಷಧ ಸಿಂಪಡಣೆ ಮತ್ತು ಬೀಜಬಿತ್ತನೆ ಸಾಮರ್ಥ್ಯವನ್ನು ಹೊಂದಿದೆ. ಬೆಳೆಯ ಸಮೀಕ್ಷೆಯನ್ನೂ ನಡೆಸುತ್ತದೆ. ಅಲ್ಲದೇ ಬೆಳೆಗೆ ಯಾವ ರೋಗ ಬಂದಿದೆ, ಎಷ್ಟು ಇಳುವರಿ ನೀಡುತ್ತದೆ ಎಂಬ ಸಮಗ್ರವಾದ ಮಾಹಿತಿಯನ್ನೂ ಈ ಡ್ರೋನ್ ದಾಖಲಿಸುತ್ತದೆ.

### ಫುಡ್ ಕೋರ್ಟ್‌ಗೆ ಮುಗಿಬಿದ್ದ ಜನ

**ಮೇಳದಲ್ಲಿ ಜನರು ಕಿಕ್ಕಿರಿದು ಸೇರುವ ಸ್ಥಳವೆಂದರೆ ಅದು, ಫುಡ್ ಕೋರ್ಟ್. ಇಲ್ಲಿ ಸಸ್ಯಾಹಾರಿ- ಮಾಂಸಾಹಾರಿ ತಿನಿಸುಗಳಿವೆ. ಬಿರಿಯಾನಿ, ಕಬಾಬ್, ಫಿಶ್ ಕಬಾಬ್, ಮೀನಿನ ಊಟ, ವಿವಿಧ ರೀತಿಯ ಖಾದ್ಯಗಳು ಬಾಯಲ್ಲಿ ನೀರೂರಿಸುವಂತಿವೆ.**



ಕೃಷಿಗೆ ಬೇಕಾದ ಯಂತ್ರೋಪಕರಣಗಳು ಹಾಗೂ ಅವುಗಳ ಬಗೆಗಿನ ಉಪಯುಕ್ತ ಮಾಹಿತಿಯು ಈ ಮೇಳದಲ್ಲಿ ಒದಗಿಸಲಾಗುತ್ತಿದೆ. ಯಂತ್ರೋಪಕರಣಗಳ ಮೇಲೆ ಸರ್ಕಾರ ಸಬ್ಸಿಡಿ ನೀಡಿದರೆ ನಮ್ಮಂತಹ ರೈತರು ಖರೀದಿಸಲು ಸಾಧ್ಯವಾಗುತ್ತದೆ.

| ಕೃಷ್ಣಪ್ಪ ಬನ್ನೂರು ನಿವಾಸಿ



20 ಎಕರೆಯಲ್ಲಿ ಆಲೂಗಡ್ಡೆ ಬೆಳೆದಿದ್ದೇನೆ. ಕೃಷಿಗೆ ಬೇಕಾದ ಯಂತ್ರೋಪಕರಣ ಖರೀದಿಗಾಗಿ ಮೇಳಕ್ಕೆ ಬಂದಿದ್ದೇನೆ. ಡ್ರೋನ್ ಬಗ್ಗೆ ಮಾಹಿತಿ ಪಡೆದು ಆದರ ಉಪಯೋಗವನ್ನು ನಮ್ಮ ಜಮೀನಿಗೆ ಪಡೆದುಕೊಳ್ಳುತ್ತೇನೆ.

| ಜಿ. ವೆಂಕಟೇಶ್ ರೈತ, ಕೋಲಾರ



ನಾನು ಸಕಲೇಶಪುರದ ನಿವಾಸಿ. ನಮಗೆ 50 ಎಕರೆ ಕಾಫಿ ತೋಟವಿದೆ. ಮೇಳದಲ್ಲಿ ನೀರಾವರಿ, ಸೋಲಾರ್ ತಂತಿ ಬೇಲಿ ಹಾಗೂ ಸಿರಿಧಾನ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಬಂದಿದ್ದೇನೆ. ಇಲ್ಲಿ ಸಾಕಷ್ಟು ಉಪಯುಕ್ತ ಮಾಹಿತಿ ಭಂಡಾರ ಇದೆ.

| ಬಿಂದು ಸಕಲೇಶಪುರ



ಚಿತ್ರಗಳು: ಸುರೇಂದ್ರ ಪೈರಂಗಳಾ

ಬೆಂಗಳೂರು ವಿವಿಯ ಜಿಕೆವಿಕೆಯಲ್ಲಿ ನಡೆಯುತ್ತಿರುವ ಕೃಷಿಮೇಳಕ್ಕೆ ಶನಿವಾರ ಸಾಕ್ಷಿಯಾದ ಅಪಾರ ಜನಸ್ತೋಮ.

### ಎಲೆ ಒಣಗಿಸುವ ಯಂತ್ರ

ಕೃಷಿ ಮೇಳದಲ್ಲಿ ಮತ್ತೊಂದು ಆಕರ್ಷಣೆ ಎಂದರೆ ಎಲೆಗಳನ್ನು ಒಣಗಿಸುವ ಯಂತ್ರ 'ಬ್ಲೋವರ್'. ಈ ಯಂತ್ರವು ಕೃಷಿ ಮೇಳದ ಸ್ಟಾರ್ಟಪ್ ವಿಭಾಗದಲ್ಲಿ ರೈತರ ಗಮನಸೆಳೆಯುತ್ತಿದೆ. ಚಿಕ್ಕಬಳ್ಳಾಪುರದ ರೈತ ಉದ್ಯಮಿ ಚೌಧರಿ ಎಂಬುವರು ಇದನ್ನು ಆವಿಷ್ಕರಿಸಿದ್ದಾರೆ. ಇದರಲ್ಲಿ 600 ಲೀಟರ್ ಸಾಮರ್ಥ್ಯದ ಔಷಧಗಳನ್ನು ತುಂಬಿಸಿಕೊಳ್ಳಬಹುದು. ಬ್ಲೋವರ್ ಅನ್ನು ಟ್ರ್ಯಾಕ್ಟರ್‌ಗೆ ಜೋಡಿಸಿಕೊಂಡು ದೊಡ್ಡ ಮಟ್ಟದ ಬೆಳೆಗಳಿಗೆ ಕ್ಷಿಪ್ರವಾಗಿ ಕೀಟನಾಶಕ ಸಿಂಪಡಿಸಬಹುದು. ದ್ರಾಕ್ಷಿ, ದಾಳಿಂಬೆ, ಮಾವು, ಸೀಬೆ, ಸಪೋಟದಂತಹ ಬೆಳೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಲು ಇದು ಸಹಕಾರಿ. ನೀರು, ಔಷಧಗಳನ್ನು ತಾನಾಗಿಯೇ ಗಿಡಗಳಿಗೆ ಸಿಂಪಡಿಸುತ್ತದೆ. ಇದಕ್ಕಾಗಿ ಪ್ರತ್ಯೇಕವಾದ ಕೊಳಾಯಿ ಮಾದರಿಯ ವ್ಯವಸ್ಥೆ ಮಾಡಲಾಗಿದೆ. ದಿನವಿಡೀ ನಾಲ್ಕು ಮಂದಿ ಮಾಡುವ ಮಾಡುವ ಕೆಲಸವನ್ನು ಈ ಯಂತ್ರ ಅರ್ಧ ಗಂಟೆಯಲ್ಲಿ ಮುಗಿಸುತ್ತದೆ. ಬ್ಲೋವರ್ 1.90 ಲಕ್ಷ ರೂ.ನಿಂದ 4.50 ಲಕ್ಷ ರೂ.ಗೆ ಲಭ್ಯವಿದೆ. ಇದಕ್ಕೆ ಸರ್ಕಾರದಿಂದ ರೈತರಿಗೆ ಸಬ್ಸಿಡಿ ಕೂಡ ಸಿಗುತ್ತದೆ. ರೈತರು ಇದನ್ನು ಖರೀದಿಸಿ, ತಮ್ಮ ತೋಟದ ಕೆಲಸಗಳಿಗೆ ಬಳಸಿಕೊಂಡು, ಖಾಲಿ ಇರುವಾಗ ಗ್ರಾಮದ ಇತರ ರೈತರಿಗೆ ಬಾಡಿಗೆಗೆ ಕೊಡಬಹುದು ಎನ್ನುತ್ತಾರೆ ಕೃಷಿ ಉದ್ಯಮಿ ಚೌಧರಿ.

### ಭಾಸ್ಕರರಾವ್ ಭೇಟಿ

ಕೃಷಿ ಮೇಳಕ್ಕೆ ಆಮ್ ಆದ್ಮಿ ಪಕ್ಷದ ರಾಜ್ಯ ಉಪಾಧ್ಯಕ್ಷ ಹಾಗೂ ಐಪಿಎಸ್ ಮಾಜಿ ಅಧಿಕಾರಿ ಭಾಸ್ಕರ್ ರಾವ್ ಶುಕ್ರವಾರ ಭೇಟಿ ನೀಡಿದರು. ರೈತರೊಂದಿಗೆ ಆಪ್ತ ಸಮಾಲೋಚನೆ ನಡೆಸಿದ ಅವರು ತಂತ್ರಜ್ಞಾನ ಅಳವಡಿಕೆ ಮಾಡಿಕೊಂಡು ಆಧುನಿಕ ಮಾದರಿ ಕೃಷಿ ನಡೆಸುವ ಬಗ್ಗೆ ಚರ್ಚೆ ನಡೆಸಿದರು.

### ಸೆನ್ಸರ್ ಸ್ವಯಂಚಾಲಿತ ನೀರಾವರಿ ತಂತ್ರಜ್ಞಾನ

ಕೃಷಿಮೇಳಕ್ಕೆ ಬರುವಂತವವರು ಜಿಕೆವಿಕೆಯ ಆವರಣದಲ್ಲಿ ಅಳವಡಿಸಲಾಗಿರುವ ಸೆನ್ಸರ್ ಸ್ವಯಂಚಾಲಿತ ನೀರಾವರಿ ತಂತ್ರಜ್ಞಾನ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಈ ಬತ್ತದ ಗದ್ದೆಗೆ ಸೆನ್ಸರ್ ಅಳವಡಿಸಲಾಗಿದ್ದು, ಗದ್ದೆಯಲ್ಲಿ ನೀರು ಖಾಲಿಯಾಗುತ್ತಿದಂತೆ ತಕ್ಷಣ ಸೆನ್ಸರ್ ಆಗಿ ತನ್ನಷ್ಟಕ್ಕೆ ತಾನೇ ನೀರನ್ನು ತುಂಬಿಸಿಕೊಳ್ಳುತ್ತದೆ. ಈ ತಂತ್ರಜ್ಞಾನದಿಂದ ಮಣ್ಣಿನ ತೇವಾಂಶ ಮತ್ತು ನೀರು ಹರಿಯುವುದನ್ನು ಮೊಬೈಲ್ ಮೂಲಕವೇ ಮೇಲ್ವಿಚಾರಣೆ ಮಾಡಬಹುದಾಗಿದೆ. ನೀರು ಪೂರೈಸಲು ರೈತರು ತೋಟದಲ್ಲಿ ಇರಬೇಕಿಲ್ಲ. ಇದಕ್ಕೆ ವಿದ್ಯುತ್ ಮತ್ತು ಸೋಲಾರ್ ಸಂಪರ್ಕ ನೀಡಲಾಗಿದೆ. ಇದರಿಂದ ಶೇ.40 ನೀರನ್ನು ಉಳಿಸಬಹುದಾಗಿದೆ. ಶೇ.30 ಲಾಭ ಗಳಿಸಬಹುದಾಗಿದೆ.




### ಪ್ರಶಸ್ತಿ ಪ್ರದಾನ


ಕೃಷಿ ವಿವಿಯ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟವಾದ ಅತ್ಯುತ್ತಮ ಲೇಖನ ಬರೆದಿರುವ ಡಾ.ಕೆ. ಶಿವರಾಮು, ಡಾ. ಎಂ.ಎ. ಮೂರ್ತಿ ಸೇರಿ ಹಲವು ಸಾಧಕರಿಗೆ ಶುಕ್ರವಾರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಇದಕ್ಕೂ ಮೊದಲು ಜಿಲ್ಲಾ ಮಟ್ಟದ ಸಾಧಕ ರೈತರಿಗೆ ವಿವಿ ವತಿಯಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.

### 1.5 ಕಿ.ಮೀ. ವ್ಯಾಪ್ತಿಯಲ್ಲಿ ಬಿತ್ತನೆ

ಸುಮಾರು 6 ಕಿ.ಮೀ. ವ್ಯಾಪ್ತಿಯವರೆಗೆ ಸಾಗುವ ಡ್ರೋನ್‌ನಲ್ಲಿ ಬೀಜ ಹಾಗೂ ಔಷಧ ತುಂಬಿಸಿಕೊಳ್ಳಲು ಪ್ರತ್ಯೇಕ ಪರಿಕರಗಳಿವೆ. 15 ನಿಮಿಷದಲ್ಲಿ 250 ಬೀಜದುಂಡೆಗಳನ್ನು ಬಿತ್ತನೆ ಮಾಡುತ್ತದೆ. 15 ನಿಮಿಷ ಚಾರ್ಜ್ ಮಾಡಿದರೆ, 1.5 ಕಿ.ಮೀ. ವರೆಗೆ ಬಿತ್ತನೆ ಮಾಡಬಹುದು. ಕೃಷಿ, ತೋಟಗಾರಿಕೆ ಬೆಳೆಗಳನ್ನು ಸರ್ವೇ ಮಾಡಿ, ಅವುಗಳ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಬಹುದು. ಯಾವುದಾದರೂ ರೋಗಬಾಧೆ ಬೆಳೆಗೆ ಇದೆಯೇ ಎಂಬುದನ್ನು ಸಕಾಲದಲ್ಲಿ ಪತ್ತೆ ಮಾಡುತ್ತದೆ. ಹೀಗಾಗಿ, ರೈತರಿಗೆ ಕೀಟಗಳಿಂದಾಗುವ ಹೊಡೆತವನ್ನು ತಪ್ಪಿಸಲು ಡ್ರೋನ್ ಹೆಚ್ಚು ಸಹಾಯಕವಾಗಿದೆ. ಈ ಡ್ರೋನ್ ಬಗ್ಗೆ ಮಾಹಿತಿ ಪಡೆದುಕೊಳ್ಳಲು ರೈತರು ಮುಗಿಬೀಳುತ್ತಿದ್ದಾರೆ. ಡ್ರೋನ್ ಸಂಸ್ಥೆ ನಮ್ಮ ಕೃಷಿ ಭೂಮಿಗೆ ಬಂದು ಔಷಧ ಸಿಂಪಡಿಸಿಕೊಡಿ ಎಂದು ಬೇಡಿಕೆ ಇಡುತ್ತಿದ್ದಾರೆ. ಗೂಗಲ್ ಮ್ಯಾಪ್ ಮೂಲಕ ಇದನ್ನು ಆಪರೇಟ್ ಮಾಡಲಾಗುತ್ತದೆ. ಇದನ್ನು ದೊಡ್ಡ ಮಟ್ಟದ ಕೃಷಿಕರು ಎಕರೆಗೆ 600 ರೂ.ನಂತೆ ಬಾಡಿಗೆಗೆ ಪಡೆಯಬಹುದಾಗಿದೆ.

### ಮೇಳಕ್ಕೆ 2.45 ಲಕ್ಷ ಜನರ ಭೇಟಿ

ಮೇಳದಲ್ಲಿ 2ನೇ ದಿನ 2.45 ಲಕ್ಷ ರೈತರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು. 11,520 ಜನರು ಕೃಷಿ ವಿವಿ ರಿಯಾಯಿತಿ ದರದ ಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಸವಿದರು. ಶುಕ್ರವಾರ 2.10 ಕೋಟಿ ರೂ. ವಹಿವಾಟು ಆಗಿದೆ. 575 ರೈತರು ಸಲಹಾ ಕೇಂದ್ರದಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.



### ಮನಸೂರೆಗೊಂಡ ಜಾನಪದ ಕಲೆ

ಮಳವಳ್ಳಿಯ ಮರಿದೇವು ಮತ್ತು ತಂಡದ ಕಂಸಾಳೆ ಕಲೆ, ರಾಮನಗರದ ಶಿವಣ್ಣ ಮತ್ತು ತಂಡದವರು ಪ್ರದರ್ಶಿಸಿದ ಜಾನಪದ ತಂಬೂರಿ ಕಲೆಗಳು ನೆರೆದವರ ಮನಸೂರೆಗೊಂಡವು. ಕಲಬುರಗಿಯ ಲಲಿತಾ ಜಾಧವ್ ತಂಡದವರು ಪ್ರದರ್ಶಿಸಿದ ಬಂಜಾರ ನೃತ್ಯಕ್ಕೆ ಜನರು ಮನಸೋತರು.



ಬಂಜಾರ ವೇಷಧಾರಿಗಳ ಜತೆ ಯುವತಿಯ ಸೆಲ್ಫಿ ಹಿಗ್ಗು.

05-11-2022
Vijayavani Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಕೋಳಿ ತಳಿ ಸಂಶೋಧನಾ ಕೇಂದ್ರ ಸ್ಥಾಪನೆಗೆ ಪ್ರಸ್ತಾಪ

## ದೇಸಿ ತಳಿ ಅಭಿವೃದ್ಧಿ ಮಾಡಲು ಆದ್ಯತೆ | ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನಿಂದ ಡಿಪಿಆರ್ ರವಾನೆ

■ ಆರ್. ತುಳಸಿಕುಮಾರ್ ಬೆಂಗಳೂರು

ರಾಜ್ಯದಲ್ಲಿ ಕುಕ್ಕುಟೋದ್ಯಮ ಬೆಳವಣಿಗೆಗೆ ಪೂರಕ ವಾಗಿ 'ದೇಸಿ ಕೋಳಿ ತಳಿ ಸಂಶೋಧನಾ ಕೇಂದ್ರ' ಸ್ಥಾಪಿಸಲು ಕೋರಿ ಹೆಬ್ಬಾಳದ ಪಶುವೈದ್ಯಕೀಯ ಕಾಲೇಜು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಕೋಳಿ ಸಾಕಣೆ ವಿಸ್ತರಣೆಯಾಗುತ್ತಿದೆ. ರೈತರು ಕೂಡ ಕೋಳಿ ಸಾಕಣೆಯನ್ನು ಉಪಕಸುಬಾಗಿ ಆದಾಯದ ಭಾಗವಾಗಿ ಪರಿವರ್ತಿಸಿಕೊಂಡ ಬಳಿಕ ಈ ಕ್ಷೇತ್ರದಲ್ಲಿ ಹೊಸ ಸಮಸ್ಯೆ, ಸವಾಲು ಎದುರಾಗಿದೆ. ಇವುಗಳಿಗೆ ವೈಜ್ಞಾನಿಕವಾಗಿಯೇ ಪರಿಹಾರ ಕಂಡುಕೊಳ್ಳಲು ಪ್ರತ್ಯೇಕವಾದ ಸಂಶೋಧನಾ ಕೇಂದ್ರದ ಅಗತ್ಯ ಇದೆ. ಇದನ್ನಾಧರಿಸಿ ಭವಿಷ್ಯದಲ್ಲಿ ಕುಕ್ಕುಟ ಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸಲು ದೇಸಿ ತಳಿ ಸಂಶೋಧನಾ ಕೇಂದ್ರವನ್ನು ಆರಂಭಿಸುವಂತೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ.

ಒಮ್ಮೆಈ ಕೇಂದ್ರ ಆರಂಭವಾದಲ್ಲಿ ಕುಕ್ಕುಟ ಕ್ಷೇತ್ರದ ಎಲ್ಲ ಅಂಶಗಳನ್ನು ಒಳಗೊಂಡಂತೆ ಸಮಗ್ರ ಸಂಶೋಧನೆಗೆ ಅವಕಾಶ ಸಿಗಲಿದೆ. ಕೋಳಿಗಳ ತಳಿ ಅಭಿವೃದ್ಧಿ, ಸಂರಕ್ಷಣೆ, ಸಾಕಣೆ ವಿಧಾನ, ಮಾರುಕಟ್ಟೆ, ತರಬೇತಿಗೂ ಪಾಲನೆ ಪಡೆಯಲಿದೆ. ಹಕ್ಕಿಜ್ವರದಂತಹ ಕಾಯಿಲೆಗಳಿಗೆ ನಿವಾರಣಾ ಕ್ರಮ, ಔಷಧ, ಲಸಿಕೆ ತಯಾರಿಕೆಗೆ ಪ್ರಯೋಗಾಲಯ ಆರಂಭಿಸಬಹುದಾಗಿದೆ. ಮುಖ್ಯವಾಗಿ ರೈತ ಸಮುದಾಯದಲ್ಲಿ ಕೋಳಿ ಸಾಕಣೆಯನ್ನು ಇನ್ನಷ್ಟು ವಿಸ್ತರಿಸಿ ದೇಸಿ ತಳಿಯನ್ನು ಜನಪ್ರಿಯಗೊಳಿಸಿ ಆ ಮೂಲಕ ಉದ್ಯೋಗಾವಕಾಶ



ಕುಕ್ಕುಟೋದ್ಯಮ ಮಳಿಗೆಯಲ್ಲಿ ಹುಂಜ ಪ್ರದರ್ಶಿಸಿದ ಸಿಬ್ಬಂದಿ.

ಹೆಚ್ಚಿಸುವ ಆಶಯ ಹೊಂದಲಾಗಿದೆ.

ಸದ್ಯ ಬೀದರ್ ಪಶುವೈದ್ಯಕೀಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಶಿವಮೊಗ್ಗ, ಹಾಸನ, ಗದಗ, ಬೀದರ್ ಹಾಗೂ ಬೆಂಗಳೂರಿನಲ್ಲಿ (ಹೆಬ್ಬಾಳ) ಪಶುವೈದ್ಯಕೀಯ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ ಹೆಬ್ಬಾಳದ ಕಾಲೇಜಿನಲ್ಲಿ ಮಾತ್ರ ಕುಕ್ಕುಟಶಾಸ್ತ್ರ ವಿಭಾಗ ಇದೆ. ಸಂಶೋಧನಾ ಕೇಂದ್ರ ಸ್ಥಾಪನೆಯಾದಲ್ಲಿ ಉಳಿದ ನಾಲ್ಕೂ ಕಾಲೇಜುಗಳಲ್ಲಿ ಹೊಸದಾಗಿ ಕುಕ್ಕುಟ ವಿಭಾಗ ತೆರೆಯಬಹುದು. ಇದು ಸ್ಥಳೀಯ ತಳಿಗಳ ಅಧ್ಯಯನಕ್ಕೂ ಸಹಕಾರಿ ಆಗಲಿದೆ ಎಂಬ ಅಭಿಪ್ರಾಯ ಪಶುವೈದ್ಯ ತಜ್ಞರಿಂದ ವ್ಯಕ್ತವಾಗಿದೆ.

### ವರ್ಷದಲ್ಲಿ ತಳಿ ನೋಂದಣಿ ಪ್ರಮಾಣಪತ್ರ

ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನ ಸಹಯೋಗ ದಲ್ಲಿ ಈಗಾಗಲೇ ಗಿರಿರಾಜ, ಸ್ವರ್ಣಧಾರ, ರಾಜ-1 ಹಾಗೂ ರಾಜ-2 ಎಂಬ ನಾಲ್ಕು ಕೋಳಿ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ಇವುಗಳಲ್ಲಿ ಗಿರಿರಾಜ ತಳಿ ಹೊರ ರಾಜ್ಯಗಳಲ್ಲೂ ಜನಪ್ರಿಯತೆ ಹೊಂದಿದೆ. ಪ್ರಸ್ತುತ ರಾಜ್ಯದ ಎಲ್ಲಾ ಜಿಲ್ಲೆಗಳ ಹವಾಗುಣಕ್ಕೆ ಒಪ್ಪುವ ಹೊಸ ನಾಟಿ ಕೋಳಿ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದರ ಸಾಕಣೆ ಫಲತಾಂಶಕ್ಕಾಗಿ ರೈತರಿಗೆ ಪ್ರಾಯೋಗಿಕ ಕೋಳಿಗಳನ್ನು ನೀಡಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. 2017ರಲ್ಲಿ ಆರಂಭವಾದ ಈ ತಳಿ ಸಂಶೋಧನಾ ಕಾರ್ಯ ಕೋವಿಡ್ ವೇಳೆ ಸ್ಥಗಿತಗೊಂಡಿತ್ತು. ಈಗ ಮತ್ತೆ ಸಂಶೋಧನೆ ಪುನರಾರಂಭಗೊಂಡಿದ್ದು, ತಳಿ ನೋಂದಣಿ ಹಾಗೂ ಪ್ರಮಾಣಪತ್ರ ಪಡೆದ ಬಳಿಕ ಮುಂದಿನ ವರ್ಷಾಂತ್ಯಕ್ಕೆ ಅಧಿಕೃತವಾಗಿ ಬಿಡುಗಡೆ ಮಾಡಲು ಗುರಿ ಹೊಂದಲಾಗಿದೆ.

ದೇಸಿ ತಳಿ ಸಂಶೋಧನಾ ಕೇಂದ್ರ ಆರಂಭಿಸಲು 15 ಕೋಟಿ ರೂ. ಮೊತ್ತದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಇದು ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಯಲ್ಲಿದ್ದು, ಮುಂದಿನ ವರ್ಷ ಒಪ್ಪಿಗೆ ಸಿಗುವ ಸಾಧ್ಯತೆ ಇದೆ. ಸಂಶೋಧನಾ ಕೇಂದ್ರದಿಂದ ಕುಕ್ಕುಟೋದ್ಯಮ ಇನ್ನಷ್ಟು ವಿಸ್ತರಣೆಯಾಗಲು ಅವಕಾಶ ಇದೆ.

**| ಡಾ.ಜಯನಾಯಕ್**
ಪಶುವೈದ್ಯಕೀಯ ಕಾಲೇಜಿನ (ಹೆಬ್ಬಾಳ) ಪ್ರಾಧ್ಯಾಪಕ

05-11-2022
Vijayavani Pg 04




# ಈರುಳ್ಳಿಯ ಕಾಂಡ ಕತ್ತರಿಸುವ ಯಂತ್ರ

■ ಮಂಜುನಾಥ ಕೆ. ಬೆಂಗಳೂರು

ಈರುಳ್ಳಿಯ ಕಾಂಡ ಕತ್ತರಿಸಲು ಸಹಕಾರಿಯಾದ ಯಂತ್ರವೊಂದನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅವಿಷ್ಕರಿಸಿದೆ.

ಆರ್ಕ-ಈರುಳ್ಳಿ ಕಾಂಡ ಕತ್ತರಿಸುವ ವಿದ್ಯುತ್‌ಚಾಲಿತ ಈ ಯಂತ್ರ ಕೃಷಿಮೇಳದ ಮುಖ್ಯ ಆಕರ್ಷಣೆಗಳಲ್ಲಿ ಒಂದೆನಿಸಿದೆ. ರೈತರು ಈರುಳ್ಳಿಯ ಕಾಂಡವನ್ನು ಕತ್ತರಿಸಿದ ನಂತರ ಅದನ್ನು ಮಾರುಕಟ್ಟೆಗೆ ಮಾರಾಟ ಮಾಡಬೇಕಾಗುತ್ತದೆ. ಕಾಂಡ ಕತ್ತರಿಸಲು ಇತ್ತೀಚಿನ ದಿನಗಳಲ್ಲಿ ಕೂಲಿ ಕಾರ್ಮಿಕರೇ ಸಿಗುತ್ತಿಲ್ಲ. ಕೂಲಿ ಕಾರ್ಮಿಕರು ಸಿಗದೆ ಈರುಳ್ಳಿ ಕೊಳೆತುಹೋದ ಹಲವು ಉದಾಹರಣೆಗಳಿವೆ. ಆದರೆ, ನೂತನ ಯಂತ್ರದ ಉಪಯೋಗ ಪಡೆದುಕೊಂಡರೆ ರೈತರು ಕೇವಲ ಒಂದು ಗಂಟೆಯಲ್ಲಿ ಒಂದೂವರೆ ಟನ್ ಈರುಳ್ಳಿ ಕಾಂಡವನ್ನು ಕತ್ತರಿಸಬಹುದು.




**ಗಾತ್ರ ವಿಂಗಡಿಸುವ ಯಂತ್ರ (ಗ್ರೇಡರ್):** ಗ್ರೇಡರ್‌ನಿಂದ ಕತ್ತರಿಸಿದ ಈರುಳ್ಳಿಯನ್ನು ಮತ್ತೊಂದು ಯಂತ್ರಕ್ಕೆ ಹಾಕಬೇಕಾಗುತ್ತದೆ. ಈ ಯಂತ್ರ ಈರುಳ್ಳಿಯನ್ನು ಗಾತ್ರದ ಮೇಲೆ ವಿಂಗಡಿಸಿ ಕೊಡುತ್ತದೆ. ಸಣ್ಣ, ಮಧ್ಯಮ, ದೊಡ್ಡ ಗಾತ್ರದ ಈರುಳ್ಳಿಯನ್ನು ವಿಂಗಡಿಸಿ ಕೊಡುತ್ತದೆ. ನಂತರ ಇವುಗಳನ್ನು ಚೀಲಗಳಿಗೆ ತುಂಬಿ ಮಾರುಕಟ್ಟೆಗಳಿಗೆ ಕಳುಹಿಸಬಹುದಾಗಿದೆ. 10 ಮಂದಿ ಮಾಡುವ ಕೆಲಸವನ್ನು ಈ ಯಂತ್ರ ಒಂದು ಗಂಟೆಯಲ್ಲಿ ಮಾಡಿ ಮುಗಿಸುತ್ತದೆ. ದಿನಕ್ಕೆ ಸುಮಾರು 12 ಟನ್ ಈರುಳ್ಳಿ ಕಾಂಡವನ್ನು ಕತ್ತರಿಸುತ್ತದೆ. ಕೈಯಿಂದ ಈರುಳ್ಳಿ ಕಾಂಡ ಕತ್ತರಿಸುವುದಕ್ಕೆ ಹೋಲಿಸಿದರೆ ಶೇ.27 ಹಣ ಉಳಿತಾಯವಾಗುತ್ತದೆ. ಈ ಯಂತ್ರಕ್ಕೆ ಚಕ್ರ ಅಳವಡಿಸಿದ್ದು, ಕೃಷಿ ಭೂಮಿಗೂ ತೆಗೆದುಕೊಂಡು ಹೋಗಿ ಟ್ರ್ಯಾಕ್ಟರ್‌ನಲ್ಲಿರುವ ಪಿಟಿಒಗೆ ಅಳವಡಿಸಿದರೆ ಈ ಯಂತ್ರ ಕೆಲಸ ಮಾಡುತ್ತದೆ. ಈ ಯಂತ್ರ ಕೊಂಚ ದುಬಾರಿಯಾಗಿರುವುದರಿಂದ ರೈತ ಸಂಘಗಳು ಖರೀದಿಸಿ ಆ ನಂತರ ರೈತರಿಗೆ ಬಾಡಿಗೆಗೆ ನೀಡಬಹುದಾಗಿದೆ.

### ಯಂತ್ರದ ಬೆಲೆ 5 ಲಕ್ಷ ರೂ.

ಈರುಳ್ಳಿ ಕಾಂಡ ಕತ್ತರಿಸುವ ಯಂತ್ರದ ಬೆಲೆ 5 ಲಕ್ಷ ರೂ. ಇದೆ. ಇದರ ದರ ಮತ್ತಷ್ಟು ಕಡಿಮೆ ಮಾಡುವ ಸಾಧ್ಯತೆ ಇದೆ. ಈ ಯಂತ್ರ ಖರೀದಿಗೆ ತಮಿಳುನಾಡು ಸರ್ಕಾರ ಸಹಾಯಧನ ವನ್ನು ನೀಡಿದೆ. ಆದರೆ, ಸಹಾಯ ಧನವನ್ನು ನೀಡಿಲ್ಲ. ಸಹಾಯಧನ ನೀಡಿದರೆ ರಾಜ್ಯದ ರೈತರು ಇದನ್ನು ಖರೀದಿ ಮಾಡಲು ಸಾಧ್ಯ.

**ಆರ್ಕ-ಈರುಳ್ಳಿ ಕಾಂಡ ಕತ್ತರಿಸುವ ವಿದ್ಯುತ್‌ಚಾಲಿತ ಯಂತ್ರ ಖರೀದಿಸಲು ತಮಿಳುನಾಡು ಸರ್ಕಾರ ಸಬ್ಸಿಡಿ ನೀಡುತ್ತದೆ. ಅದೇ ರೀತಿ ಕರ್ನಾಟಕ ಸರ್ಕಾರ ಸಬ್ಸಿಡಿ ನೀಡಿದರೆ ಹೆಚ್ಚಿನ ರೈತರು ಈ ಯಂತ್ರವನ್ನು ಖರೀದಿಸಲು ಮುಂದೆ ಬರುತ್ತಾರೆ. ರೈತ ಸಂಘಗಳು ಕೂಡ ಇವುಗಳನ್ನು ಖರೀದಿ ಬಾಡಿಗೆಗೆ ನೀಡಬಹುದು.**

**| ಪಿ. ದಯಾನಂದ್** ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಧಿಕಾರಿ, ಹೆಸರಘಟ್ಟ

05-11-2022
V-karnataka Pg 04

# ಸೂರ್ಯಕಾಂತಿಗೆ ಮತ್ತೆ ಶುಕ್ರದೆಸೆ

## ಉಕ್ರೇನ್-ರಷ್ಯಾ ಯುದ್ಧದ ಪ್ರಭಾವ | ಕೇಂದ್ರ ಸರಕಾರದ ಉತ್ತೇಜನದ ಪರಿಣಾಮ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ಉಕ್ರೇನ್-ರಷ್ಯಾ ಯುದ್ಧದ ನಂತರ ರಾಜ್ಯದಲ್ಲಿ ಸೂರ್ಯಕಾಂತಿ ಬೆಳೆಗೆ ಬೇಡಿಕೆ ಹೆಚ್ಚಾಗಿದೆ. ಖಾದ್ಯ ತೈಲ ಆಮದು ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರಕಾರವೂ ಉತ್ತೇಜನ ನೀಡುತ್ತಿರುವ ಹಿನ್ನೆಲೆಯಲ್ಲಿ ರೈತರು ಸಹ ಸೂರ್ಯಕಾಂತಿ ಬೆಳೆಯಲು ಉತ್ಸಾಹ ತೋರಿಸುತ್ತಿದ್ದಾರೆ.

ರಾಜ್ಯದಲ್ಲಿ ದಶಕದ ಹಿಂದೆ ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಬೆಳೆಯಿತ್ತು. ತದನಂತರ ಅದಕ್ಕೆ ಬೆಂಬಲ ಬೆಲೆ ಸಿಗದಿರುವುದು ಮತ್ತಿತರ ಕಾರಣಗಳಿಂದ ರೈತರು ಸೂರ್ಯಕಾಂತಿ ಬೆಳೆಯಿಂದ ವಿಮುಖರಾಗುತ್ತಾ ಹೋದರು. ಹೀಗಾಗಿ, ಸೂರ್ಯಕಾಂತಿ ಬೆಳೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಯಿತು. 2020ರಲ್ಲಿ0.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿಸೂರ್ಯಕಾಂತಿ ಬೆಳೆಯಿತ್ತು. ಭಾರತಕ್ಕೆ ಬೇಕಾದ ಬಹುಪಾಲು ಸೂರ್ಯಕಾಂತಿ ಎಣ್ಣೆಯನ್ನು ಉಕ್ರೇನ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಯಾವಾಗ ರಷ್ಯಾ-ಉಕ್ರೇನ್ ನಡುವೆ ಯುದ್ಧ ನಡೆಯತೋ ಆಗ ಭಾರತಕ್ಕೆ ಬರುತ್ತಿದ್ದತೈಲ ಆಮದು ಸಂಪೂರ್ಣ ನಿಂತು ಹೋಯಿತು. ತಕ್ಷಣ ಅಡುಗೆ ಎಣ್ಣೆದರ ಗಗನಕ್ಕೇರಿತು.

"ಭವಿಷ್ಯದಲ್ಲಿ ಅಂತಹ ಸಂದರ್ಭ ಬಾರದಿರಲಿ ಎಂಬ ಕಾರಣದಿಂದ ಕೇಂದ್ರ ಸರಕಾರ ಸೂರ್ಯಕಾಂತಿ ಬೆಳೆಗಾರರಿಗೆ ಹಾಗೂ ಸೂರ್ಯಕಾಂತಿ ಬೀಜೋತ್ಪಾದನೆಗೆ ಹೆಚ್ಚಿನ ಉತ್ತೇಜನ ನೀಡಿದೆ. ಸೂರ್ಯಕಾಂತಿ ಬೀಜ ಉತ್ಪಾದನೆಗೆ 40 ಕೋಟಿ ರೂ.ಗಳಗೂ ಅಧಿಕ ಅನುದಾನ ಘೋಷಿಸಿದೆ. ದೇಶದ 9 ಕೇಂದ್ರಗಳಲ್ಲಿ ಸೂರ್ಯಕಾಂತಿ ಬೀಜೋತ್ಪಾದನೆಗೆ ಕೇಂದ್ರದ ಅನುದಾನ ನೀಡಲಾಗುತ್ತಿದೆ. ಹೀಗಾಗಿ, ಬಿತ್ತನೆ ಬೀಜ ಉತ್ಪಾದನೆ ಪ್ರಮಾಣ ಹೆಚ್ಚಾಗಿದ್ದು, ರೈತರಿಂದಲೂ ಬೇಡಿಕೆ ಹೆಚ್ಚಾಗಿದೆ. ಇದರ ಪರಿಣಾಮ ಈಗ ರಾಜ್ಯದಲ್ಲಿ 1.3 ಲಕ್ಷ ಹೆಕ್ಟೇರ್‌ಗೆ ಸೂರ್ಯಕಾಂತಿ ಬೆಳೆ ವಿಸ್ತರಣೆಯಾಗಿದೆ. ರೈತರು ಕೂಡ ಸೂರ್ಯಕಾಂತಿ ಬೆಳೆಯ



**0.90** ಲಕ್ಷ ಹೆಕ್ಟೇರ್- 2020ರಲ್ಲಿ ರಾಜ್ಯದಲ್ಲಿಸೂರ್ಯಕಾಂತಿ ಬಿತ್ತನೆಯಾದ ಪ್ರದೇಶ

**1.30** ಲಕ್ಷ ಹೆಕ್ಟೇರ್- 2022ರಲ್ಲಿ ರಾಜ್ಯದಲ್ಲಿಸೂರ್ಯಕಾಂತಿ ಬಿತ್ತನೆಯಾದ ಪ್ರದೇಶ

ಬಗ್ಗೆ ಹೆಚ್ಚಿನ ಒಲವು ತೋರುತ್ತಿದ್ದಾರೆ. ಅದಕ್ಕೆ ತಕ್ಕಂತೆ ಬೆಂಗಳೂರು ಕೃಷಿ ವಿವಿಯು ಕೂಡ ರೈತರಿಗೆ ಅಧಿಕ ಇಳುವರಿ ಕೊಡುವಂತಹ ಸೂರ್ಯಕಾಂತಿ ತಳಿಗಳನ್ನು ಅಭಿವೃದ್ಧಿಪಡಿಸಿದೆ," ಎನ್ನುತ್ತಾರೆ ಜಿಕೆವಿಕೆ ಎಣ್ಣೆ ಕಾಳು ವಿಭಾಗ( ಸೂರ್ಯಕಾಂತಿ) ಸಹ ಪ್ರಾಧ್ಯಾಪಕ ಡಾ. ಎಸ್.ಡಿ. ನೆಹರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ ಕೃಷಿಮೇಳದಲ್ಲಿಅಧಿಕ ಎಣ್ಣೆ ಅಂಶದ ಸೂರ್ಯಕಾಂತಿ ತಾಕು ಬಳಿ ರೈತರು ತಂಡೋಪತಂಡವಾಗಿ ತೆರಳಿ ಮಾಹಿತಿ ಪಡೆಯುತ್ತಿರುವುದು ಶುಕ್ರವಾರ ಕಂಡುಬಂತು. ಕೃಷಿ ವಿವಿ ಅಭಿವೃದ್ಧಿಪಡಿಸಿರುವ ಅಧಿಕ ಇಳುವರಿ ನೀಡುವ ಮತ್ತು ಹೆಚ್ಚು ಎಣ್ಣೆ ಅಂಶ ಹೊಂದಿರುವ ಕೆಬಿಎಸ್‌ಎಚ್-78, ಕೆಬಿಎಸ್‌ಎಚ್-85 ತಳಿಗಳನ್ನು ಬಿಡುಗಡೆ ಮಾಡಿ, ತಾಕುಗಳಲ್ಲಿ ಬೆಳೆಸಲಾಗಿದೆ. ಇದು ಅಲ್ಪಾವಧಿ

### ನೂತನ ತಳಿಗಳ ವಿಶೇಷತೆ

ಕೆಬಿಎಸ್‌ಎಚ್-78, ಕೆಬಿಎಸ್‌ಎಚ್-85 ತಳಿಗಳು ಶೇ.40-42 ರಷ್ಟು ಎಣ್ಣೆ ಅಂಶವನ್ನು ಹೊಂದಿವೆ (ಇತರೆ ತಳಿಗಳು ಶೇ.38-40ರವರೆಗೆ ಎಣ್ಣೆ ಅಂಶ ಹೊಂದಿವೆ). ಮೂರು ತಿಂಗಳಲ್ಲಿಕೊಯ್ಲಿಗೆ ಬರಲಿದೆ. ಒಂದು ಎಕರೆಗೆ 2 ಕೆ.ಜಿ.ಬಿತ್ತನೆ ಬೀಜ ಬೇಕಾಗುತ್ತದೆ. ಒಂದು ಹೆಕ್ಟೇರ್‌ಗೆ ನೀರಾವರಿಯಿದ್ದರೆ 8-10 ಕ್ವಿಂಟಾಲ್ ಹಾಗೂ ಮಳೆಯಾಶ್ರಿತವಾದರೆ 5-6 ಕ್ವಿಂಟಾಲ್ ಇಳುವರಿ ನೀಡುತ್ತದೆ. ಒಂದು ಕ್ವಿಂಟಲ್‌ಗೆ 30 ಕೆ.ಜಿ. ಎಣ್ಣೆತೆಗೆಯಬಹುದು. ಜಿಕೆವಿಕೆನಲ್ಲಿಈ ಬೀಜಕ್ಕೆ ಕೆ.ಜಿ.ಗೆ 590 ರೂ.ದರ ಇದೆ. ಸರಕಾರ ಈಗ ಸೂರ್ಯಕಾಂತಿ ಬೆಳೆದವರಿಗೆ ಕನಿಷ್ಠ ಬೆಂಬಲ ಬೆಲೆಯನ್ನೂ ನೀಡಲಿದೆ.

ಬೆಳೆಯಾಗಿದ್ದು, ಇದರ ಬಗ್ಗೆ ಮಾಹಿತಿ ಪಡೆಯಲು ಉತ್ತರ ಕರ್ನಾಟಕದ ಭಾಗಗಳಿಂದಲೂ ರೈತರು ಕೃಷಿ ಮೇಳಕ್ಕೆ ಆಗಮಿಸಿದ್ದರು.

"ಜಿಕೆವಿಕೆಯಲ್ಲಿಸುಮಾರು 50 ವರ್ಷಗಳ ಸಂಶೋಧನಾ ಚಟುವಟಿಕೆಗಳಿಂದ ಸುಧಾರಿತ ಹೆಚ್ಚು ಎಣ್ಣೆ ಅಂಶ ಹೊಂದಿದ ಹಾಗೂ ಬೀಜದ ಇಳುವರಿ ಕೊಡುವ ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಿದೆ. ನಮ್ಮ ಹಲವು ಸಂಕರಣ ತಳಿಗಳು ಕರ್ನಾಟಕ ಮಾತ್ರವಲ್ಲದೆ ಹೊರ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಣ, ಅಸ್ಸಾಂ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಇದರ ಜತೆಗೆ ಸೂರ್ಯಕಾಂತಿ ಬೆಳೆಯಲ್ಲಿ ಆಳವಡಿಸಬೇಕಾಗಿರುವ ಆಧುನಿಕ ಬೇಸಾಯ ಕ್ರಮಗಳು, ಕೀಟ ಹಾಗೂ ರೋಗಗಳ ಹತೋಟಿ ಕ್ರಮಗಳನ್ನು ಕೈಗೊಂಡು ರೈತರಿಗೆ ಹೆಚ್ಚಿನ ಆದಾಯ ಗಳಿಸುವಲ್ಲಿ ಸಹಕಾರಿಯಾಗಿದೆ," ಎಂದು ಜಿಕೆವಿಕೆ ಎಣ್ಣೆಕಾಳು ವಿಭಾಗದ ಪ್ರಾಧ್ಯಾಪಕಿ ಉಮಾ ಮಾಹಿತಿ ನೀಡಿದರು.

# ಬಿಡುವು ಕೊಟ್ಟ ಮಳೆ: ಮೇಳಕ್ಕೆ ಭರ್ಜರಿ ರೆಸ್ಪಾನ್ಸ್

■ ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರು ಕೃಷಿ ವಿವಿ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಎರಡನೇ ದಿನವಾದ ಶುಕ್ರವಾರ ಮಳೆ ಬಿಡುವು ಕೊಟ್ಟ ಹಿನ್ನೆಲೆಯಲ್ಲಿ 2.45 ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸಿದ್ದರು.

ಮೇಳದ ವೀಕ್ಷಣೆಗೆ ರಾಜ್ಯದ ಹಲವೆಡೆಯಿಂದ ಜನ ತಂಡೋಪತಂಡವಾಗಿ ಆಗಮಿಸಿದರು. ಶಾಲಾ- ಕಾಲೇಜು ವಿದ್ಯಾರ್ಥಿಗಳು ಕೃಷಿ ಮೇಳಕ್ಕೆ ಪ್ರವಾಸಕ್ಕೆಂದು ಬಂದಿದ್ದರು. ಆದರಲ್ಲೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮೇಳಕ್ಕೆ ಬಂದು ಹೊಸ ಹೊಸ ತಂತ್ರಜ್ಞಾನಗಳನ್ನು ವೀಕ್ಷಿಸಿದ್ದು ಗಮನ ಸೆಳೆಯಿತು.

''ಮೇಳಕ್ಕೆ 2.45 ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸಿದ್ದು, 11,250 ಮಂದಿ ರಿಯಾಯಿತಿ ದರದಲ್ಲಿ ಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಮಾಡಿದರು. ಎರಡನೇ ದಿನ ಬರೋಬ್ಬರಿ 2.10 ಕೋಟಿ ರೂ. ವಹಿವಾಟು ನಡೆದಿದೆ. 575 ಮಂದಿ ರೈತರು ಸಲಹಾ ಕೇಂದ್ರದಿಂದ ಮಾಹಿತಿ ಪಡೆದುಕೊಂಡರು,'' ಎಂದು ವಿವಿಯ ಪ್ರಾಧ್ಯಾಪಕ ಡಾ. ಕೆ. ಶಿವರಾಮು ತಿಳಿಸಿದರು.

ಕೃಷಿ ವಿವಿಯ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟವಾದ ಅತ್ಯುತ್ತಮ ಲೇಖನಗಳಿಗೆ ಡಾ. ಎಂ.ಎ.ಮೂರ್ತಿ, ಡಾ. ಕೆ. ಶಿವರಾಮು ಸೇರಿದಂತೆ ಹಲವು ವಿವಿಯ ಸಿಬ್ಬಂದಿಗೆ ಶುಕ್ರವಾರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಇದಕ್ಕೂ ಮೊದಲು ಜಿಲ್ಲಾಮಟ್ಟದ ಸಾಧಕ ರೈತರಿಗೆ ವಿವಿ ವತಿಯಿಂದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.



ಜಿಕೆವಿಕೆಯಲ್ಲಿನ ಕೃಷಿ ಮೇಳದಲ್ಲಿ ಎರಡನೇ ದಿನ ಕಂಡುಬಂದ ಜನಸಾಗರ. ಚಿತ್ರ : ಕೆ.ಎಸ್. ಗಣೇಶ್

## ಕೃಷಿ ಮೇಳದಲ್ಲೂ ಕಾಂತಾರದ ಹವಾ

ಕೃಷಿ ಮೇಳದಲ್ಲಿ ರೇಷ್ಮೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು 'ಕಾಂತಾರ' ಚಲನಚಿತ್ರದ ದೈವಕೋಲ ವೇಷಧಾರಿಯ ಪ್ರತಿಕೃತಿಯನ್ನು ರೇಷ್ಮೆ ಗೂಡುಗಳಲ್ಲಿ ಪ್ರದರ್ಶಿಸಿದ್ದು ಜನಾಕರ್ಷಣೆಯ ಕೇಂದ್ರ ಬಂದುವಾಗಿದೆ.



ಪ್ರತಿ ಬಾರಿಯ ಕೃಷಿ ಮೇಳದಲ್ಲಿ ಕೆಲವು ಮಾರಾಟಗಾರರು ಪ್ಲಾಸ್ಟಿಕ್ ಬಳಸುತ್ತಿದ್ದರು. ಈ ಬಾರಿ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲಾಗಿದೆ. ಮೇಳದಲ್ಲಿ ಊಟದಿಂದ ಮಾಹಿತಿ ಪಡೆಯುವವರೆಗೆ ಎಲ್ಲವೂ ಅಚ್ಚುಕಟ್ಟಾಗಿದೆ. ಇಂತಹ ಮೇಳಗಳಿಗೆ ಶಾಲಾ, ಕಾಲೇಜು ಮಕ್ಕಳನ್ನು ಹೆಚ್ಚಿಸು ಕರೆತರಬೇಕು.

– ಸೌಮ್ಯಾ ವಿ. ಗೌಡ ಮೈಸೂರು

## ತೆಂಗಿನ ಕಾಫಿಗೆ ಫಿದಾ

**ಬೆಂಗಳೂರು:** ಘಮ ಘಮಿಸುವ ತೆಂಗಿನ ಕಾಫಿಗೆ ಕೃಷಿ ಮೇಳದಲ್ಲಿ ಜನ ಫಿದಾ ಆಗಿದ್ದರು.



ತೆಂಗಿನ ಹಾಲಿನ ಕಾಫಿ ಪುಡಿಯ ಪ್ಯಾಕ್ (ಕೃಷಿಮೇಳದಲ್ಲಿ ಗಮನ ಸೆಳೆದ ತೆಂಗಿನ ಕಾಫಿ)

ತೆಂಗಿನ ಹಾಲಿನ ಪುಡಿ ಮತ್ತು ಇನ್ ಸ್ಟಂಟ್ ಕಾಫಿ ಪುಡಿಗಳ ಮಿಶ್ರಣದಿಂದ ತಯಾರಿಸಿದ ಕಾಫಿಯನ್ನು ಅವರು ಸವಿದರು. ಬಿಸಿನೀರು ಕಾಯಿಸಿ ಅದಕ್ಕೆ ಈ ಪುಡಿಯನ್ನು ಬೆರೆಸಿದರೆ ಘಮ ಘಮ ಕಾಫಿ ರೆಡಿ. ಇದು ಕೇಂದ್ರ ತೆಂಗು ಮಂಡಳಿಯ ಮಳಿಗೆಯಲ್ಲಿ ಕಂಡು ಬಂತು. ಇದನ್ನು ಕೇರಳ ತೆಂಗು ಮಂಡಳಿ ಸಿದ್ಧಪಡಿಸಿದೆ.

''ತೆಂಗಿನ ಹಾಲಿನ ಪುಡಿ ಮತ್ತು ಕಾಫಿ ಪುಡಿಗಳ ಮಿಶ್ರಣದ ಪುಡಿಯನ್ನು ಪ್ಯಾಕ್ ಮಾಡಲಾಗಿರುತ್ತದೆ. ಇದು ಸಿಂಗಲ್ ಮತ್ತು ಫ್ಯಾಮಿಲಿ ಪ್ಯಾಕ್ ಮಾದರಿಯಲ್ಲಿರುತ್ತದೆ. ಪ್ರವಾಸ ಹೋದಾಗ ಅಥವಾ ಮನೆಯಲ್ಲಿಯೇ ಇದ್ದಾಗಲೂ ಈ ಕಾಫಿ ತಯಾರಿಸಿ ಸಕ್ಕರೆ ಬೆರೆಸಿ ಕುಡುಯಬಹುದು. ಇದು ಹೆಚ್ಚು ರುಚಿಯಾಗಿರುತ್ತದೆ,'' ಎನ್ನುತ್ತಾರೆ ತ್ರಿಶೂರ್‌ನ ಕೇಂದ್ರ ತೆಂಗು ಮಂಡಳಿಯ ಶೋಭಾ.

## ಕೃಷಿಯಲ್ಲಿ ತೊಡಗಿದ ಭಾಸ್ಕರ ರಾವ್

ಕೃಷಿ ಮೇಳಕ್ಕೆ ಆಮ್ ಆದ್ಮಿ ಪಕ್ಷದ ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಶುಕ್ರವಾರ ಭೇಟಿ ನೀಡಿದರು. ರೈತರೊಂದಿಗೆ ಆಪ್ತ ಸಮಾಲೋಚನೆ ನಡೆಸಿದ ಭಾಸ್ಕರ್ ರಾವ್, ತಂತ್ರಜ್ಞಾನ ಅಳವಡಿಕೆ ಮಾಡಿಕೊಂಡು ಆಧುನಿಕ ಮಾದರಿ ಕೃಷಿ ನಡೆಸುವ ಬಗ್ಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಅವರು ಕೆಲವು ಖಾಸಗಿ ಕೃಷಿ ತಂತ್ರಜ್ಞಾನ ಸಂಸ್ಥೆಗಳು, ವ್ಯವಸಾಯ ಉತ್ಪನ್ನ ಮಾರಾಟ ಸಂಸ್ಥೆಗಳು ಕೃಷಿ ಸ್ಟಾರ್ಟ್ ಆಪ್ ಹಾಗೂ ಆಧುನಿಕ ನೀರಾವರಿ ಘಟಕಗಳ ಪ್ರತಿನಿಧಿಗಳೊಂದಿಗೂ ವಿಚಾರ ವಿನಿಮಯ ನಡೆಸಿದರು. ಇದೇ ವೇಳೆ ಕೃಷಿ ಮೇಳದಲ್ಲಿನ ಕೆಲವು ಯಂತ್ರೋಪಕರಣಗಳನ್ನು ಪ್ರಾಯೋಗಿಕವಾಗಿ ಬಳಸುವ ಮೂಲಕ ಕೃಷಿಯಲ್ಲಿ ತೊಡಗಿದ ಅನುಭವವನ್ನು ಹೊಂದಿದರು.

## 2 ಲಕ್ಷ ರೂ.ಗೆ ಬಂಡೂರು ಕುರಿ ಮಾರಾಟ

**ಬೆಂಗಳೂರು:** ಬೆಂಗಳೂರು ಕೃಷಿ ವಿವಿ ಆಯೋಜಿಸಿದ್ದ ಕೃಷಿ ಮೇಳದಲ್ಲಿ ಮಂಡ್ಯ ಜಿಲ್ಲೆಯ ಬೋರೇಗೌಡ ಎಂಬುವರಿಗೆ ಸೇರಿದ ಐದು ವರ್ಷದ ಬಂಡೂರು ಕುರಿಯೊಂದು ಬರೋಬ್ಬರಿ 2.01 ಲಕ್ಷ ರೂ. ರೂ.ಗೆ ಬಿಕರಿಯಾಗಿದೆ.



ಮಂಡ್ಯ ಜಿಲ್ಲೆಯೊಂದರಿಂದಲೇ 2500 ಕುರಿಗಳು ಕೃಷಿ ಮೇಳಕ್ಕೆ ಬರುವುದಾಗಿ ನೋಂದಣಿ ಮಾಡಿಕೊಳ್ಳಲಾಗಿದೆ. ಇದರಲ್ಲಿ ರೈತ ಬೋರೇಗೌಡ ಮೂರು ತಿಂಗಳ ಕುರಿಮರಿ ಸಹಿತ 22 ಕುರಿಗಳನ್ನು ಮೇಳಕ್ಕೆ ಕರೆತಂದು ಬಿಕರಿಗಿಟ್ಟಿದ್ದಾರೆ.

ಕಾರ್ಪೊರೇಟ್ ಕಂಪೆನಿಯೊಂದರಲ್ಲಿ ಕೆಲಸ ಮಾಡುವ ಹರೀಶ್‌ಗೌಡ ಎಂಬುವರು ಐದು ವರ್ಷದ ಬಂಡೂರು ಕುರಿಯನ್ನು ಎರಡು ಲಕ್ಷ ರೂ.ಗೆ ಖರೀದಿಸಿದ್ದಾರೆ. ''ಕಳೆದ ಬಾರಿಯೂ ಕೆಲವು ಕುರಿಗಳನ್ನು ಖರೀದಿಸಿದ್ದೆ. ಈ ಬಾರಿಯೂ ಬ್ರೀಡಿಂಗ್‌ಗಾಗಿ ಈ ಕುರಿಯನ್ನು ಖರೀದಿಸಿದ್ದೇನೆ,'' ಎಂದು ಹರೀಶ್ ಹೇಳಿದರು.



ಬೋರೇಗೌಡ ಮಾತನಾಡಿ, ''ಕಳೆದ ಬಾರಿ ಹಳ್ಳಕಾರ್ ತಳಿಯ ಗೋವುಗಳನ್ನು ತಂದಿದ್ದೆ. ಈ ಬಾರಿ ಚರ್ಮಗಂಟು ರೋಗದಿಂದ ದನಗಳನ್ನು ತಂದಿಲ್ಲ. ಬಂಡೂರು ಕುರಿಯನ್ನು ಮಾತ್ರ ತರಲಾಗಿದೆ. ಎಲ್ಲ ಮಳಿಗೆಗಳಲ್ಲಿ ಮಾರಾಟವಾಗುವ ಕುರಿಮಾಂಸ ಬಂಡೂರು ಕುರಿ ಮಾಂಸವೆಂದು ಹೇಳುತ್ತಾರೆ. ಆದೆಲ್ಲವೂ ಸುಳ್ಳು. ಬಂಡೂರು ತಳಿಯಲ್ಲೇ ಏಳು ಉಪಜಾತಿಗಳಿವೆ. ಮಳವಳ್ಳಿಯಲ್ಲಿ ಕಳೆದ 15 ವರ್ಷಗಳಿಂದ ಬಂಡೂರು ಕುರಿ ಸಾಕುತ್ತಿದ್ದೇನೆ. ಈಗಲೂ 50 ಕುರಿಗಳಿದ್ದು, ಅವುಗಳ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದೇನೆ,'' ಎಂದರು.

## ಮೊಟ್ಟೆ ಹಣ್ಣು, ಬಿಲ್ವದ ಜ್ಯೂಸ್ ಆಕರ್ಷಣೆ

**ಬೆಂಗಳೂರು:** ಬೆಂಗಳೂರು ಕೃಷಿ ವಿವಿ ಕೃಷಿ ಮೇಳದಲ್ಲಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ತೆರೆದಿರುವ ಮಳಿಗೆಯಲ್ಲಿ ಮೊಟ್ಟೆ ಹಣ್ಣು ವಿಶೇಷ ಆಕರ್ಷಣೆಯಾಗಿದೆ. ಮೊಟ್ಟೆತಿನ್ನದವರು ಈ ಹಣ್ಣನ್ನು ತಿಂದರೆ ಮೊಟ್ಟೆ ತಿಂದ ಅನುಭವವಾಗುತ್ತದೆ. ಹೀಗಾಗಿ, ಜನ ಅತ್ಯಂತ ಕುತೂಹಲದಿಂದ ಮೊಟ್ಟೆ ಹಣ್ಣನ್ನು ವೀಕ್ಷಿಸುತ್ತಿದ್ದರು.




ಕೃಷಿ ಮೇಳದಲ್ಲಿ ಗಮನ ಸೆಳೆಯುತ್ತಿರುವ ಮೊಟ್ಟೆ ಹಣ್ಣು

ಮೊಟ್ಟೆಯಾಕಾರದಲ್ಲಿ ಮಾವಿನಹಣ್ಣಿನಂತೆ ಹಳದಿ ಬಣ್ಣವನ್ನು ಹೊಂದಿರುವ ಇದು ವಿದೇಶಿ ತಳಿ. ಕಾಯಿಯಾಗಿದ್ದಾಗ ಹುಸಿರು ಬಣ್ಣ ಹೊಂದಿದ್ದು, ಮಾಗಿದ ನಂತರ ಆದು ಸಿಪ್ಪೆ ಮತ್ತು ತಿರುಳು ಕೂಡ ಹಳದಿ ಬಣ್ಣದಲ್ಲಿರುತ್ತದೆ. ಮೊಟ್ಟೆಹಣ್ಣಿನಲ್ಲಿ ಹೇರಳ ಪೋಷಕಾಂಶಗಳಿವೆ ಎಂದು ಐಐಎಚ್‌ಆರ್ ಸಿಬ್ಬಂದಿ ತಿಳಿಸಿದರು.

**ಜ್ಯೂಸ್‌ಗಾಗಿ ಬಂದಿದೆ ಬಿಲ್ವ ಹಣ್ಣು:** ಬಿಲ್ವಪತ್ರೆಯ ಮರದಲ್ಲಿ ಬಿಡುವ ಬಿಲ್ವಕಾಯಿಯನ್ನು ಈ ಹಿಂದೆ ಗ್ರಾಮೀಣರು ಸ್ನಾನದ ವೇಳೆ ತಲೆ ತೊಳೆಯಲು ಬಳಸುತ್ತಿದ್ದರು. ಇದರಿಂದ ತಲೆ ತೊಳೆದರೆ ಕೂದಲು ಹೊಳಪು ಹೆಚ್ಚುತ್ತಿತ್ತು. ಈಗ ಬಿಲ್ವದ ಸಂಕರಣ ತಳಿಯನ್ನು ಐಐಎಚ್‌ಆರ್ ಅಭಿವೃದ್ಧಿಪಡಿಸಿದ್ದು, ಇದನ್ನು ಜ್ಯೂಸ್ ಮಾಡಲು ಬಳಸುತ್ತಾರೆ. ದೊಡ್ಡ ಗಾತ್ರದ ಈ ಬಿಲ್ವಹಣ್ಣು ಹುಸಿರು ಬಣ್ಣವನ್ನು ಹೊಂದಿದ್ದು, ಹೆಚ್ಚು ಪ್ರೊಟೀನ್ ಮತ್ತು ವಿಟಮಿನ್ ಬಿ12 ಅಂಶ ಹೆಚ್ಚಾಗಿ ಹೊಂದಿದೆ. ಹೀಗಾಗಿ, ಗರ್ಭಿಣಿಯರಿಗೆ ಇದು ಹೆಚ್ಚು ಆರೋಗ್ಯಕರ ಎಂಬುದು ಪ್ರದರ್ಶಕರ ಅಭಿಪ್ರಾಯ.

# ಕುಲಾಂತರಿ ಸಾಸಿವೆ ವಿರೋಧಿಸಿ ಪತ್ರ ಚಳವಳಿ

## ಕುಲಾಂತರಿ ಮುಕ್ತ ಭಾರತ ಮೈತ್ರಿಕೂಟ ಕರೆ । ದೇಶದಲ್ಲಿ ಅನ್ನದಾತರ ಆತ್ಮಹತ್ಯೆ ಹೆಚ್ಚಾಗುವ ಭೀತಿ

■ ವಿಕ ಸುದ್ದಿಲೋಕ ಬೆಂಗಳೂರು

ಹೊಸದಿಲ್ಲಿ ವಿಶ್ವವಿದ್ಯಾಲಯವು ಸಂಶೋಧಿಸಿರುವ ಕುಲಾಂತರಿ ಸಾಸಿವೆ ತಳಿ ವಿರೋಧಿಸಿ ಕುಲಾಂತರಿ ಮುಕ್ತ ಭಾರತ ಮೈತ್ರಿಕೂಟವು ದೇಶಾದ್ಯಂತ ಪತ್ರ ಚಳವಳಿಗೆ ಕರೆ ನೀಡಿದೆ.

ಈ ಕುರಿತು ಶುಕ್ರವಾರ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಕುಲಾಂತರಿ ಮುಕ್ತ ಭಾರತ ಮೈತ್ರಿಕೂಟದ ಸದಸ್ಯರು, ''ನಮ್ಮ ಆಹಾರ, ಪರಿಸರ ಹಾಗೂ ಕೃಷಿಯಲ್ಲಿ ಕುಲಾಂತರಿ ಬೇಡವೇ ಬೇಡ. ಇದನ್ನು ಒಕ್ಕೂರಲಿನಿಂದ ಹೇಳಲು ರೈತರು ಹಾಗೂ ಸಾರ್ವಜನಿಕರು 04433124242 ನಂಬರ್‌ಗೆ ಮಿಸ್ಡ್ ಕಾಲ್ ಕೊಡಬೇಕು. ಜತೆಗೆ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯದ ಸಚಿವರಿಗೂ ಪತ್ರ ಬರೆಯಬೇಕು,'' ಎಂದು ಕೋರಿದರು.

''ಕುಲಾಂತರಿ (ಬಿ.ಟಿ) ಬದನೆಕಾಯಿ ವಿರೋಧಿಸಿ ದೇಶದಲ್ಲಿ 2010ರಲ್ಲಿ ದೊಡ್ಡ ಜನಾಂದೋಲನ ನಡೆಯಿತು. ಬಳಿಕ ಕೇಂದ್ರ ಸರಕಾರ ಬಿ.ಟಿ ಬದನೆಕಾಯಿಗೆ ಅನಿರ್ದಿಷ್ಟಾವಧಿ ನಿಷೇಧ ಹೇರಿತು. ಬಳಿಕ ಬಿ.ಟಿ ಹತ್ತಿ ರೈತರ ಸ್ವಾವಲಂಬನೆ ಕಸಿದು ಕೊಂಡಿತು. ಕೀಟ ನಿರೋಧಕ ಸಾಮರ್ಥ್ಯ ಹೊಂದಿದೆ ಎಂಬ ತುತ್ತೂರಿಯೊಂದಿಗೆ ರೈತರ ಹೊಲಕ್ಕೆ ಕಾಲಿಟ್ಟ ಕುಲಾಂತರಿ ಹತ್ತಿ ತನ್ನ ಅಸಲಿ ಮುಖ ತೋರಿಸಿತು. ಇದರಿಂದ ದೇಶದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾದವು,'' ಎಂದು ದೂರಿದರು.

''ಹೊಸದಿಲ್ಲಿ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಜೆನೆಟಿಕ್ ಮ್ಯಾನುಪುಲೇಶನ್ ಆಫ್ ಕ್ರಾಪ್ ಪ್ಲಾಂಟ್ಸ್ (ಸಿಜಿಎಂಸಿಪಿ) ಕುಲಾಂತರಿ ಸಾಸಿವೆ ಸಂಶೋಧಿಸಿ, ಮತ್ತೊಂದು ಆಹಾರ ಬೆಳೆಯನ್ನು ಕುಲಾಂತರಗೊಳಿಸಿ ವಾಣಿಜ್ಯ ಕೃಷಿಯತ್ತ ತರಲು ಹುನ್ನಾರ ನಡೆಸಿದೆ. ಕುಲಾಂತರಿ ಸಾಸಿವೆ ಬಿಡುಗಡೆಗೆ ಬೇಕಿರುವ ಪರೀಕ್ಷಾ ವರದಿ ಮತ್ತು ಸುರಕ್ಷಾ ಕ್ರಮಗಳಿಗಾಗಿ



ಪರಿಸರ ಸಂರಕ್ಷಣಾ ಕಾಯಿದೆ- 1989ರ ಅನುಸಾರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯ ವ್ಯಾಪ್ತಿಯ ಕುಲಾಂತರಿ ತಂತ್ರಜ್ಞಾನ ಅನುಮೋದನಾ ಸಮಿತಿಗೆ (ಜಿಇಎಸಿ) ಅರ್ಜಿ ಸಲ್ಲಿಸಿದೆ,'' ಎಂದು ಕಿಡಿಕಾರಿದರು.

''ಸಿಜಿಎಂಸಿಪಿ, ಧಾರಾ ಮಸ್ಟರ್ಡ್ ಹೈಬ್ರೀಡ್-2 ಹಾಗೂ ಮತ್ತೆರಡು ತಳಿ ಸೇರಿದಂತೆ ಮೂರು ಕುಲಾಂತರಿ ತಳಿ ಸಾಸಿವೆಗೆ ಅನುಮೋದನೆ ಕೊಡುವಂತೆ ಜಿಇಎಸಿಗೆ ಮನವಿ ಮಾಡಿದೆ. ದೇಶದ ಜನರ ತೆರಿಗೆ ಹಣದಲ್ಲಿನ ಒಂದು ಪಾಲನ್ನು ಕುಲಾಂತರಿ ಸಾಸಿವೆ ತಳಿಗಳ ಸಂಶೋಧನೆಗೆ ಖರ್ಚು ಮಾಡಲಾಗಿದೆ. ದೇಶದ ಪ್ರಜೆಗಳನ್ನು ಪ್ರಯೋಗಾಲಯದ ಇಲಿಗಳಂತೆ ಪರಿಗಣಿಸಿ, ಕುಲಾಂತರಿ ಸಾಸಿವೆ ಬೆಳೆ ಬಳಕೆಗೆ ಅನುಮತಿ ನೀಡಲು ಮುಂದಾಗಿರುವುದು ಖಂಡನೀಯ. ರೈತ ನಿಯಂತ್ರಿತ, ಸುರಕ್ಷಿತ, ಕಡಿಮೆ ವೆಚ್ಚದ ಹಾಗೂ ಸುಸ್ಥಿರ ತಂತ್ರಜ್ಞಾನವನ್ನು ದೇಶದ ಕೃಷಿಯ ನಿಜವಾದ ಪರಿಹಾರವೆಂದು ಉತ್ತೇಜಿಸೋಣ. ಚಳವಳಿ ಭಾಗವಾಗಿ ಕೇಂದ್ರ ಪರಿಸರ ಸಚಿವರಿಗೆ ಪತ್ರ ಬರೆದು moefcc@nic.in ವಿಳಾಸಕ್ಕೆ ಇ-ಮೇಲ್ ಕಳುಹಿಸಬೇಕು'' ಎಂದು ಒಕ್ಕೂಟದ ಸದಸ್ಯರು ಮನವಿ ಮಾಡಿದರು.

ಕೃಷಿ ನೀತಿ ತಜ್ಞ ದೇವಿಂದರ್ ಶರ್ಮ, ರೇಪ್ ಸೀಡ್ ಮಸ್ಟರ್ಡ್ ರೀಸರ್ಚ್ ನಿರ್ದೇಶನಾಲಯದ ನಿವೃತ್ತ ನಿರ್ದೇಶಕ ಡಾ.ಧೀರಜ್ ಸಿಂಗ್, ಆಶಾ ಕಿಸಾನ್ ಸ್ವರಾಜ್‌ನ ಕಪಿಲ್ ಶಾ, ಕೃಷಿ ವಿಜ್ಞಾನಿ ಡಾ.ಎಸ್.ಕೆ.ಮನ್ನಾ, ಕುಲಾಂತರಿ ಮುಕ್ತ ಭಾರತ ಮೈತ್ರಿಕೂಟದ ಕವಿತಾ, ಭಾರತೀಯ ಕಿಸಾನ್ ಸಂಘದ ಮೋಹಿನಿ ಮೋಹನ್ ಮಿಶ್ರಾ ಹಾಜರಿದ್ದರು.

05-11-2022
V-karnataka Pg 04

05-11-2022
V-karnataka Pg 02

### ಕೃಷಿ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ • ₹ 2.10 ಕೋಟಿ ವಹಿವಾಟು

# 2ನೇ ದಿನ 2.45 ಲಕ್ಷ ಜನರಿಂದ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ 2ನೇ ದಿನವಾದ ಶುಕ್ರವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಮೊದಲ ದಿನಕ್ಕಿಂತ ಎರಡನೇ ದಿನ ಹೆಚ್ಚಿನ ಜನರು ಕಂಡುಬಂದರು. ಜಿಕೆವಿಕೆ ಆವರಣದಲ್ಲಿ ಇಡೀ ದಿನ ರೈತರು, ವಿದ್ಯಾರ್ಥಿಗಳ ಕಲರವ ಇತ್ತು. ರೈತರು ಎಲ್ಲ ಮಳಿಗೆಯನ್ನು ವೀಕ್ಷಿಸಿ, ಮಾಹಿತಿ ಪಡೆಯುವ ಪ್ರಯತ್ನ ಮಾಡಿದರು.

ಗ್ರಾಮೀಣ ಸೊಗಡು ಮಳಿಗೆಗಳು ಇರುವ ಕಡೆ ಹೆಚ್ಚಿನ ಜನರು ಕಾಣಿಸಿದರು. ಮಳೆ ಬಿಡುವು ನೀಡಿದ್ದರಿಂದ ಎಲ್ಲ ಕಡೆಯೂ ಓಡಾಟ ನಡೆಸಿ ಮೇಳ ವೀಕ್ಷಿಸಲು ಸಾಧ್ಯವಾಯಿತು.

ಎರಡನೇ ದಿನ 2.45 ಲಕ್ಷ ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. 11,250 ಜನರು ಕೃಷಿ ವಿಶ್ವವಿದ್ಯಾಲಯದ ರಿಯಾಯಿತಿ ದರದ ಊಟ ಸವಿದರು. ₹ 2.10 ಕೋಟಿ ವಹಿವಾಟು ನಡೆದಿದೆ. 575 ರೈತರು ಸಲಹಾ ಕೇಂದ್ರದಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಬೆಂಗಳೂರು ಕೃಷಿ ವಿವಿ ವಿಶ್ರಾಂತ ಕುಲಪತಿ ಡಾ.ಎಂ.ಎನ್. ಶೀಲವಂತರ್ ಮಾತನಾಡಿ, 'ಪ್ರಸ್ತುತ ಸನ್ನಿವೇಶದಲ್ಲಿ ರೈತರ ಜೀವನ ಸಂಕಷ್ಟದಲ್ಲಿದೆ. ರೈತರಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವುದು ಆರ್ಥಿಕ, ಪೋಷಕಾಂಶ, ಮಾರುಕಟ್ಟೆ ಭದ್ರತೆ ಮತ್ತು ಬೆಳೆಗಳಿಗೆ ನೀರು' ಎಂದು ಹೇಳಿದರು.

'ಮಣ್ಣಿನಲ್ಲಿ ಬೆಳೆಗಳಿಗೆ ಬೇಕಾದಂತಹ ಸೂಕ್ಷ್ಮ ಪೋಷಕಾಂಶಗಳ ಕೊರತೆ ಕಂಡುಬರುತ್ತಿದೆ. ಮಣ್ಣಿನಲ್ಲಿ ಪೋಷಕಾಂಶ ಹೆಚ್ಚಿಸಬೇಕಿದೆ. ಸೂಕ್ತವಾದ ವೈಜ್ಞಾನಿಕ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬೇಕು' ಎಂದು ಮಾಹಿತಿ ನೀಡಿದರು. ಚಾಮರಾಜನಗರ, ಮೈಸೂರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹಾಗೂ ಅತ್ಯುತ್ತಮ ವೈಜ್ಞಾನಿಕ ಲೇಖನಗಳಿಗೆ ಡಾ.ಆರ್.ದ್ವಾರಕೀನಾಥ್ ಮತ್ತು ಪ್ರೊ.ಬಿ.ವಿ.ವೆಂಕಟರಾವ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಕೃಷಿ ಕುಲಪತಿ ಡಾ.ಎಸ್.ವಿ.ಸುರೇಶ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಕೃಷಿ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ, ಡಾ.ಕೆ.ನಾರಾಯಣಗೌಡ, ಡಾ.ಎಂ. ಹನುಮಂತಪ್ಪ, ಡಾ.ಆರ್.ಸಿ.ಜಗದೀಶ, ಡಾ.ಎನ್.ಬಿ.ಪ್ರಕಾಶ್, ಡಾ.ಕೆ. ನಾರಾಯಣಗೌಡ ಹಾಜರಿದ್ದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ರೇಷ್ಮೆ ಗೂಡುಗಳಿಂದ ತಯಾರಿಸಲಾದ, 'ಕಾಂತಾರ' ಸಿನಿಮಾದ ಪಂಜುರ್ಲಿ ದೈವದ ಪ್ರತಿಕೃತಿ ಜನರನ್ನು ಆಕರ್ಷಿಸಿತು

–ಪ್ರಜಾವಾಣಿ ಚಿತ್ರ

### ಮೇಳಕ್ಕೆ ಆಗಮಿಸಿದವರು- 2.45 ಲಕ್ಷ ಜನರು | ಮೇಳದಲ್ಲಿ ಭೋಜನ ಮಾಡಿದವರು-11,550 ಮಂದಿ

# ಕೃಷಿಮೇಳ ಎಲ್ಲೆಲ್ಲೂ ಜನಜಾತ್ರೆ...

ಸಂ.ಕ.ಸಮಾಚಾರ, ಬೆಂಗಳೂರು

ಎಲ್ಲೆಲ್ಲೂ ಜನಜಾತ್ರೆ, ತಂಡೋಪತಂಡವಾಗಿ ಆಗಮಿಸುವ ರೈತರು, ನೂತನ ಆವಿಷ್ಕಾರ ತಿಳಿಯಲು ಬರುವ ವಿದ್ಯಾರ್ಥಿ ಸಮೂಹ, ಎಲ್ಲೆಲ್ಲೂ ಜನಜಂಗುಳಿ ಇವೆಲ್ಲವೂ ಕೃಷಿ ವಿವಿ ಜಿಕೆವಿಕೆ ಆವರಣದಲ್ಲಿ ಏರ್ಪಡಿಸಿದ್ದ ಕೃಷಿ ಮೇಳದಲ್ಲಿ ಕಂಡುಬಂದವು.

ರೈತರಿಂದ..ರೈತರಿಗಾಗಿ..ರೈತರಿಗೋಸ್ಕರ ಏರ್ಪಡಿಸಿರುವ ಕೃಷಿಮೇಳ-2022ರ ಎರಡನೇ ದಿನವಾದ ಶುಕ್ರವಾರ ನಿರೀಕ್ಷೆಗೂ ಮೀರಿ ಯಶಸ್ಸು ಉಂಟಾಗಿದೆ. ಮೊದಲ ದಿನ 1.60ಲಕ್ಷ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದ ಮೇಳ ಎರಡನೇ ದಿನವಾದ ಶುಕ್ರವಾರ 2.45 ಲಕ್ಷ ಜನರನ್ನು ಕೈಬೀಸಿ ಕರೆದಿದೆ.

**ದಿನದ ವಹೀವಾಟು- 2.10 ಲಕ್ಷ ರೂ.**

ಮೇಳದಲ್ಲಿ ಸಾಧಕ ರೈತರ ಪರಿಶ್ರಮ, ಕೃಷಿಯಲ್ಲಿ ಲಾಭ ಕಂಡುಕೊಂಡ ಬಗೆ ಅನಾವರಣಗೊಂಡಿದೆ. ಖಿಷ್ಟಿ ಬೇಸಾಯದ ಬೆಳೆ, ತೋಟಗಾರಿಕೆ ಮಳಿಗೆ, ಸಮಗ್ರ ಬೇಸಾಯ ಪದ್ಧತಿ ವಿಧಾನ, ಜಲಾನಯನ ನಿರ್ವಹಣೆ, ಹನಿ ನೀರಾವರಿ ಪದ್ಧತಿ, ಚಾವಣಿ ಹಾಗೂ ಮಳೆ ನೀರು ಸಂಗ್ರಹ ವಿಧಾನ, ಮಣ್ಣು ರಹಿತ ಕೃಷಿಯ ಆವಿಷ್ಕಾರ, ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳು ಗಮನ ಸೆಳೆಯುತ್ತಿವೆ. ಮೇಳದಲ್ಲಿ ನಿರ್ಮಿಸಲಾಗಿದ್ದ 700ಕ್ಕೂ ಹೆಚ್ಚು ಮಳಿಗೆಗಳಲ್ಲಿ ಬಹುತೇಕ ಭರ್ತಿಯಾಗಿದ್ದು ಪ್ರತಿ ಮಳಿಗೆಯೂ ವಿಭಿನ್ನ ರೀತಿಯ ಅನುಭವವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿಗೆ ನೀಡುತ್ತಿರುವ ಸಬ್ಸಿಡಿ, ಉತ್ತೇಜನ, ನವೋದ್ಯಮ ಕಂಪನಿಗಳಿಗೆ ನೀಡುತ್ತಿರುವ ಪ್ರೋತ್ಸಾಹವನ್ನು ಅರಿತುಕೊಳ್ಳಲು ಹೆಚ್ಚು ಹೆಚ್ಚು ಯುವಕ ಯುವತಿಯರು ಆಗಮಿಸುತ್ತಿರುವುದು ಮೇಳದ ಪ್ರಮುಖ ಆಕರ್ಷಣೆಯಾಗಿತ್ತು. ಇನ್ನೂ ತರಹೇವಾರಿ ತಳಿಗಳ ಕುರಿಗಳು, ಗಿರಿರಾಜ್ ಕೋಳಿ, ಪಳ್ಳಿಕಾರ್ ಹಸು, ಮತ್ತು ಮಂಗಳೂರಿನ ಮೀನುಗಳು ಪ್ರಾಣಿಪ್ರಿಯರನ್ನು ತನ್ನತ್ತ ಸೆಳೆಯುವಂತೆ ಮಾಡಿತು.





## ಹನಿ ನೀರಾವರಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ

ಬೆಂಗಳೂರು: ಹನಿ ನೀರಾವರಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನವನ್ನು ಕಂಡುಹಿಡಿದಿರುವುದರಿಂದ ಕ್ರಾಂತಿಯೆಂದು ಮೂಡಿದೆ. ನಗರದ ಕೃಷಿಮೇಳದಲ್ಲಿ ಡ್ರಿಪ್ ಸ್ಮಾರ್ಟ್ ಹೆಸರಿನಲ್ಲಿ ಬೆಂಗಳೂರು ಮೂಲದ ಮೇಘಾ ಆಗ್ರೊಟೆಕ್ ಪ್ರೈ.ಲಿ. ಕಂಪನಿ ವಿಶೇಷ ತಂತ್ರಜ್ಞಾನವನ್ನು ಹನಿ ನೀರಾವರಿ ವ್ಯವಸ್ಥೆಗೆ ಅಳವಡಿಸಿದ್ದು,ಸಾಕಷ್ಟುಸಂಖ್ಯೆಯಯಮಮೂಪವನ್ನು ತನ್ನತ್ತ ಸೆಳೆದಿದೆ. ಅತ್ಯಂತ ಕಡಿಮೆ ಪ್ರಮಾಣದ ಜನರಿಂದಲೇ ಇದನ್ನು ನಿರ್ವಹಿಸಬಹುದಾಗಿದೆ. ಕೇವಲ ಮೊಬೈಲ್ ಆಪ್ಲಿಕೇಷನ್ ಮೂಲಕವೇ ಯಾರು ಬೇಕಾದರೂ, ಎಲ್ಲಿಬೇಕಾದರೂ ಕುಳಿತು ಇದರ ಕಾರ್ಯ ನಿರ್ವಹಣೆ ಮಾಡಬಹುದು. ಅಲ್ಲದೇ ವಾತಾವರಣ, ಪರಿಸ್ಥಿತಿ, ಪರಿಸರ ಆಧರಿಸಿ ಭೂಮಿಗೆ ಅಗತ್ಯವಿರುವ ನೀರು ಹಾಗೂ ಗೊಬ್ಬರವನ್ನು ಪೂರೈಸುವ, ಕಾಲಮಾನಕ್ಕೆ ತಕ್ಕಂತೆ ಭೂಮಿಗೆ ಅಗತ್ಯವಿರುವ ಪೋಷಕಾಂಶವನ್ನು ಒದಗಿಸುವ ವಿಶಿಷ್ಟ ಕಾರ್ಯವನ್ನು ಇದು ಮಾಡುತ್ತದೆ.


## ಗುಡಿಕೈಗಾರಿಕೆಗಳ ಗಮ್ಮತ್ತು

ಗುಡಿ ಕೈಗಾರಿಕೆಗಳ ಪ್ರಾತ್ಯಕ್ಷಿಕೆ ಗ್ರಾಪಕರ ಮನ ಸೆಳೆಯುವಂತೆ ಮಾಡಿದೆ. ಕುಂಬಾರಿಕೆಯ ತಿರುಗಣಿಯಲ್ಲಿ ಸಣ್ಣ ಸಣ್ಣ ಹಣತೆಗಳಿಂದ ಹಿಡಿದು ದೊಡ್ಡ ದೊಡ್ಡ ಪಾಟ್‌ಗಳವರೆಗೂ ತಯಾರಿಸುವುದನ್ನು ಕಾಣಬಹುದಾಗಿತ್ತು. ಇನ್ನೊಂದೆಡೆ ಕಳೆನಾಶಕ ಯಂತ್ರಗಳಿಂದ ಹೇಗೆ ಹೊಲವನ್ನು ಹದಗೊಳಿಸಬೇಕೆನ್ನುವ ಪ್ರಾತ್ಯಕ್ಷಿಕೆಯನ್ನು ಎಲ್ಲ ಕಂಪನಿಗಳು ತಮ್ಮ ತಮ್ಮ ಉತ್ಪನ್ನಗಳನ್ನು ರೈತರ ಕೈಗಿಟ್ಟು ಪ್ರಾಯೋಗಿಕ ಅನುಭವ ನೀಡುತ್ತಿವೆ.

## ವಿದ್ಯಾರ್ಥಿಯಿಂದ ಡ್ರೋಣ್ ಸಂಶೋಧನೆ

ಬೆ.ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ ಮಡಿಕೇರಿ ಮೂಲದ ಹವ್ಯಾಸ್ ಆವಿಷ್ಕರಿಸಿದ ಬಹುಪಯೋಗಿ ಕೃಷಿ ಡ್ರೋಣ್ ರೈತರ ಗಮನ ಸೆಳೆಯಿತು. ರಿಮೋಟ್ ಕಂಟ್ರೋಲ್ ಆಧಾರಿತ ದೈತ್ಯಾಕಾರದ ಡ್ರೋಣ್ ಗೂಗಲ್ ಮ್ಯಾಪ್ ಆಧರಿಸಿ ಮೊದಲ ಏರಿಯಾ ಸ್ಕ್ಯಾನ್ ಮಾಡಿ ಸಂದೇಶ ರವಾನಿಸುತ್ತದೆ. ಇದರಿಂದ ಎಲ್ಲೆಲ್ಲಿ ಬೆಳೆ ಕುಂಠಿತವಾಗಿದೆ, ಎಲ್ಲಿ ಬಿತ್ತನೆ ಸರಿಯಾಗಿಲ್ಲ ಎನ್ನುವುದನ್ನು ಕಂಡು ಹಿಡಿದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎನ್ನುತ್ತಾರೆ ಹವ್ಯಾಸ್. ಒಮ್ಮೆ ಮೇಲೆ ಹಾರಿದರೆ 6ಕಿ.ಮಿವರೆಗೂ ಸಂಚರಿಸುವ ಶಕ್ತಿ ಹೊಂದಿರುವ ಇದು 15 ನಿಮಿಷಗಳಲ್ಲಿ 1 ಎಕರೆ ಪ್ರದೇಶದಲ್ಲಿ ಔಷಧ ಸಿಂಪಡಣೆ ಮತ್ತು ಬೀಜ ಬಿತ್ತನೆ ಮಾಡುವ ಸಾಮರ್ಥ್ಯ ಹೊಂದಿದೆ. 15 ನಿಮಿಷದಲ್ಲಿ 250 ಬೀಜದುಂಡೆಗಳ ಬಿತ್ತನೆ ಮಾಡುವ ಇದು ಆಷ್ಟೇ ನಿಮಿಷಗಳಲ್ಲಿ ಒಂದು ಎಕರೆ ಕೀಟನಾಶಕವನ್ನು ಸಹ ಸಿಂಪಡಿಸುವ ಸಾಧನ ಎನ್ನುವುದು ವಿಶೇಷ. ಎಕರೆಗೆ 600 ರೂ. ಬಾಡಿಗೆ ವಿಧಿಸುವ ಇವರಿಗೆ ದೊಡ್ಡ ಆವರಣಗಳನ್ನು ಹೊಂದಿರುವ ಕಂಪನಿ ಮತ್ತು ಜಮೀನ್ದಾರರಿಂದ ಬೇಡಿಕೆ ಬರುತ್ತಿದೆ ಎಂದು ಹೇಳಿದರು.

2018ರಲ್ಲಿ ಇಸ್ರೇಲ್‌ಗೆ ಭೇಟಿ ನೀಡಿ ಅಲ್ಲಿನ 6 ದಿನಗಳ ಕಾಲ ಅಲ್ಲಿನ ಕೃಷಿ ಪದ್ಧತಿಯನ್ನು ಅಧ್ಯಯನ ಮಾಡಿದ್ದೇನೆ. ಕೃಷಿ ಉತ್ಪನ್ನದಲ್ಲಿ ಆವರಿಗಿಂತ ನಾವೇ ಮುಂದಿದ್ದೇವೆ. ಆದರೆ ನಾವು ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆ ದೊರೆಯುತ್ತಿಲ್ಲ. ಹೀಗಾಗಿ ಇಲ್ಲಿನ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಕೃಷಿಮೇಳದಂತಹ ರೈತಸ್ನೇಹಿ ಸಮ್ಮೇಳನಗಳಲ್ಲಿಈ ಕುರಿತು ಹೆಚ್ಚು ಬೆಳಕು ಚೆಲ್ಲುವ ಅವಶ್ಯಕತೆ ಇದೆ.



■ ನಾರಾಯಣ್ ಸ್ವಾಮಿ, ರೈತ, ಚೆನ್ನಂಪಳ್ಳಿ ಚಿಕ್ಕಾಬಳ್ಳಾಪುರ ಜಿಲ್ಲೆ.

ನಮ್ಮ ಹೊಲಗಳಲ್ಲಿ ದಿನ ಬಳಕೆಯ ಟೊಮೆಟೊ, ಬೀನ್ಸ್, ಸೊರೆಕಾಯಿ, ಸೌತೆಕಾಯಿಯನ್ನು ಬೆಳೆಯುತ್ತಿದ್ದೇವೆ. ಇಲ್ಲಿನ ರೈತ ವಿಜ್ಞಾನಿಗಳ ಜೊತೆ ಸಮಾಲೋಚನೆ ಮಾಡಿ ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ಬೆಳೆಯುವ ಹೊಸ ವಿಧಾನಗಳನ್ನು ತಿಳಿದುಕೊಂಡು ಅಳವಡಿಸಿಕೊಳ್ಳುವ ಸಲುವಾಗಿ ಬಂದಿದ್ದೇವೆ.



■ ಪಿ.ಮಾದಪ್ಪ | ಆಯರಹಳ್ಳಿ, ಮೈಸೂರು ಜಿಲ್ಲೆ

## ಗಮನ ಸೆಳೆದ ಭಜರಂಗಿ ಯಂತ್ರ

ಕೃಷಿ ವಿಶ್ವವಿದ್ಯಾಲಯದ ವತಿಯಿಂದ ನಡೆಯುತ್ತಿರುವ ಕೃಷಿ ಮೇಳದಲ್ಲಿ ಹೊಸದಾಗಿ ಅವಿಷ್ಕಾರವಾಗಿರುವ 12 ಕೆಲಸ ಕಾರ್ಯಗಳನ್ನು ನಿರ್ವಹಿಸುವ ಮಲ್ಟಿ ಪರ್ಪಸ್ ಪವರ್ ಇಂಟರ್ ಕಲ್ಟಿವೇಟರ್ 'ಭಜರಂಗಿ' ಯಂತ್ರವು ಕೃಷಿಕರೂ ಸೇರಿದಂತೆ ಸಾರ್ವಜನಿಕರ ಗಮನ ಸೆಳೆಯಿತು. ರೈತರಿಗೆ ಎದುರಾಗುವ ತೊಂದರೆಗಳ ಬಗ್ಗೆ ಅಧ್ಯಯನ ನಡೆಸಿ, ರೈತರು ಅಂತರ ಬೇಸಾಯವನ್ನು ಸುಲಭ ರೀತಿಯಲ್ಲಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಮಲ್ಟಿ ಪರ್ಪಸ್ ಪವರ್ ಇಂಟರ್ ಕಲ್ಟಿವೇಟರ್ ಭಜರಂಗಿ ಯಂತ್ರವನ್ನು ಅಭಿವೃದ್ಧಿ ಪಡಿಸಿದೆ. ಈ ಯಂತ್ರದ ಸಹಾಯದಿಂದ 12 ವಿವಿಧ ರೀತಿಯ ಕೃಷಿ ಕೆಲಸಗಳಾದ ಉಳುಮೆ, ಕಳೆ ತೆಗೆಯುವುದು, ರಿಡ್ಜರ್, ಲೆವೆಲಿಂಗ್, ಕೂರ್ಗೆ, ಬೆಡ್ ಫಾರ್ಮೇಷನ್, ಸ್ಪ್ರೆಯರ್, ವಾಟರ್ ಲಿಫ್ಟಿಂಗ್, ಟ್ರಾಲಿ, ಚಾಪ್ ಕಟ್ಟರ್, ಮಿಲ್ಲಿಂಗ್ ಮಷಿನ್ ಮಾಡಲು ಸಾಧ್ಯ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾಕ್ಟರ್ ಸಿ ನಾಗರಾಜ ಭಜರಂಗಿ ಯಂತ್ರವನ್ನು ಅಂತರ ಬೇಸಾಯ ಪದ್ಧತಿ ಅಳವಡಿಸಿಕೊಂಡು ಸಂಶೋಧಿಸಿದ್ದಾರೆ.

## ಆಕರ್ಷಿಸುತ್ತಿರುವ ಬ್ಯಾಂಬೋ ಮಳಿಗೆ

ಬಿದಿರಿನಿಂದ ತಯಾರಾಗಿರುವ ನಾನಾಬಗೆಯ ಕುರ್ಚಿಗಳಿಂದ ಹಿಡಿದು ಮನೆ ನಿರ್ಮಾಣದವರೆಗೂ ವೈವಿಧ್ಯತೆಯನ್ನು ಬ್ಯಾಂಬೋ ಮಳಿಗೆಯಲ್ಲಿನೋಡಬಹುದಾಗಿದೆ. ಬದಿರನ್ನು ಬಳಸಿಕೊಂಡು, ಕಾರು ಮ್ಯಾಟ್, ವಿವಿಧ ವಿನ್ಯಾಸಗಳ ಕುಡಿಯುವ ನೀರಿನ ಪಿಂಗಾಣಿ ಜನರ ಗಮನ ಸೆಳೆಯುತ್ತಿವೆ.



# ನೇಕಾರಿಕೆಗೆ ರೋಬೋ ಲೂಮ್ಸ್

## ವಿಶ್ವದಲ್ಲೇ ವಿನೂತನ ವಿಧಾನದ ಮಗ್ಗದೊಂದಿಗೆ ಜಾಕಾರ್ಡ್

■ ನಾಗರಾಜು ಅಶ್ವತ್ಥ್ ಬೆಂಗಳೂರು ಗ್ರಾಮಾಂತರ
nagaraju.a@timesgroup.com

ರಾಜ್ಯದ ನೇಕಾರಿಕೆಗೆ ಆಧುನಿಕ ಸ್ಪರ್ಶ ಸಿಗುತ್ತಿದ್ದು, ವಿಶ್ವದಲ್ಲೇ ಮೊದಲ ಬಾರಿಗೆ ಒಂದೇ ಮಗ್ಗದಲ್ಲಿ ಕೈಮಗ್ಗ, ವಿದ್ಯುತ್ ಮತ್ತು ರೇಪಿಯರ್ ಮಗ್ಗ ಗಳನ್ನು ಬಳಸಬಹುದಾದ ತಂತ್ರಜ್ಞಾನ ವನ್ನು ಬೆಂಗಳೂರಿ ನಲ್ಲಿ ಕಂಡುಕೊಳ್ಳ ಲಾಗಿದೆ. ಆ ಮೂಲಕ ಸೀರೆ ನೇಯ್ಗೆಗೆ ತಗುಲುವ ವೆಚ್ಚ ಮತ್ತು ವಿನೂತನ ವಿನ್ಯಾಸಗಳ ಭಾರವನ್ನು ಕಡಿತಗೊಳಿಸ ಲಾಗುತ್ತಿದೆ. ಜತೆಗೆ, ಕಂಪ್ಯೂಟರೈಸ್ಡ್ ಜಾಕಾರ್ಡ್‌ನಿಂದಾಗಿ ವಿವಿಧ ಮಾದರಿಯ ಚಿತ್ರಗಳನ್ನು, ವಿನ್ಯಾಸಗಳನ್ನು ಸೀರೆಯ ಮೇಲೆ ಸುಲಭವಾಗಿ ಪಡೆಯುವ ಆಧುನಿಕ ತಂತ್ರಜ್ಞಾನವನ್ನು ಕಂಡುಕೊಳ್ಳಲಾಗಿದೆ.

ಕಡಿಮೆ ಶಬ್ದ ಮಾಡುವ ಮತ್ತು ಅತ್ಯಂತ ಕಡಿಮೆ ಎತ್ತರದ ಜಾಕಾರ್ಡ್ ಮಗ್ಗ ಮಾರುಕಟ್ಟೆಗೆ ಬರುತ್ತಿದ್ದು, ನೇಕಾರಿಕಾ ವಲಯಕ್ಕೆ ಹೊಸ ಚೈತನ್ಯ ನೀಡಿದಂತಾಗಿದೆ. ಗದಗ-ಬೆಟಗೇರಿ, ಬೆಳಗಾವಿ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಲಕ್ಷಾಂತರ ಕೈಮಗ್ಗ ನೇಕಾರರಿದ್ದು, ಬೆಂಗಳೂರು ನಗರ, ಗ್ರಾಮಾಂತರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ವಿದ್ಯುತ್ ಮಗ್ಗಗಳು, ರೇಪಿಯರ್ ಮಗ್ಗಗಳನ್ನು ಬಳಸಲಾಗುತ್ತಿದೆ. ದಶಕಗಳ ಹಿಂದಿನ ತಂತ್ರಜ್ಞಾನದಡಿ ಸಾಗುತ್ತಿದ್ದ ನೇಕಾರಿಕಾ ವಲಯದ 3 ವಿಧಾನಗಳನ್ನು ಒಂದೇ ಕಡೆ ರೂಪಿಸಲಾಗಿದೆ. ಈ ಮಗ್ಗದ ಸದ್ದು ಹೂಡಿಕೆದಾರರ ಸಮಾವೇಶದಲ್ಲಿ ಕೇಳಿಸಿದ್ದು, ಹೂಡಿಕೆದಾರರು ಆಸಕ್ತಿ ತೋರಿದ್ದಾರೆ.



### ಏನು ಉಪಯೋಗ?

- ಅತ್ಯಂತ ಕಡಿಮೆ ಖರ್ಚಿಗೆ ಸಾಮಾನ್ಯಕ್ಕಿಂತ ದುಪ್ಪಟ್ಟು ಉತ್ಪನ್ನ
- ಕಡಿಮೆ ಜಾಗದಲ್ಲಿ ಮಗ್ಗ ಅಳವಡಿಸಲು ಅನುಕೂಲ
- 2 ಅಥವಾ 3ನೇ ಮಹಡಿಯಲ್ಲಿ ಮಗ್ಗ ಅಳವಡಿಸಬಹುದು
- ಆಧುನಿಕ ಕಂಪ್ಯೂಟರೈಸ್ಡ್ ವಿನ್ಯಾಸಗಳನ್ನು ಸೀರೆ ಮೇಲೆ ಪಡೆಯಬಹುದು
- ಅತ್ಯಂತ ಕಡಿಮೆ ಶಬ್ದ ನಿರ್ವಹಣೆ ಸುಲಭ

05-11-2022
V-karnataka
Pg 04

# ಮೆಣಸಿನಕಾಯಿ, ಕ್ಯಾಪ್ಸಿಕಂ ಬೆಳೆ ಸಮೃದ್ಧಿಗೆ ಗ್ರೋ ಇಟ್ ಸಾಥ್

**ಬೆಂಗಳೂರು:** ಮೆಣಸಿನಕಾಯಿ ಮತ್ತು ದಪ್ಪ ಮೆಣಸಿನಕಾಯಿಗೆ(ಕ್ಯಾಪ್ಸಿಕಂ) ಬೆಳೆ ಹೊದಿಕೆ ಗಳನ್ನು(ಕ್ರಾಪ್ ಕವರ್) ಬಳಸುವುದು ಹೇಗೆ, ಯಾವಾಗ ಬಳಸಬೇಕು ಮತ್ತು ಅವುಗಳನ್ನು ಏಕೆ ಇನ್‌ಸ್ಟಾಲ್ ಮಾಡಬೇಕು, ಯಾವಾಗ ತೆರವುಗೊಳಿಸಬೇಕು ಎನ್ನುವು ದನ್ನು ರೈತರು ಅರ್ಥ ಮಾಡಿಕೊಳ್ಳಬೇಕು.

ಗುಜರಾತ್ ಮೂಲದ ಗ್ರೋಇಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಕೃಷಿ ತಜ್ಞರ ತಂಡವು ಸಂಶೋಧನೆ ನಡೆಸಿ ಕ್ರಾಪ್ ಕವರ್‌ಗಳನ್ನು(ಬೆಳೆಗಳ ಹೊದಿಕೆ) ಅಭಿವೃದ್ಧಿ ಪಡಿಸಿದೆ. ಈ ಬಗ್ಗೆ ಅಧಿಕೃತ ಮಾಹಿತಿಗೆ ಗ್ರೋಇಟ್ ಇಂಡಿಯಾದ ಅಧಿಕೃತ ವೆಬ್ ಸೈಟ್‌ಗೆ ಭೇಟಿ ನೀಡಬಹುದು.

ನೀವು ಈಗಾಗಲೇ ಕ್ರಾಪ್ ಕವರ್‌ಗಳ ಬಳಕೆಯನ್ನು ಆರಂಭಿಸಿದ್ದರೆ, ರಕ್ಷಣಾತ್ಮಕ ಕೃಷಿಯತ್ತ ನಿಮ್ಮ ಮೊದಲ ಹೆಜ್ಜೆ ಇಟ್ಟಿದ್ದೀರಿ ಎಂದರ್ಥ. ಕ್ರಾಪ್ ಕವರ್‌ಗಳನ್ನು ಬಳಸುವ ಮೂಲಕ ಮೆಣಸಿನಕಾಯಿಗೆ ಥ್ರೆಪ್ಸ್ ಮತ್ತಿತರ ಭಯಾನಕ ಕೀಟಗಳ ವಿರುದ್ಧ ರಕ್ಷಣೆ ನೀಡಬಹುದು. ಈ ಸಂಸ್ಥೆಯು ಈಗಾಗಲೇ ಉತ್ತಮ ಗುಣಮಟ್ಟದ ನಾನ್-ವೋವನ್ ಕ್ರಾಪ್ ಕವರ್‌ಗಳನ್ನು ತಯಾರಿಸುತ್ತಿದ್ದು, ಇವು ಹೆಚ್ಚು ಬಾಳಿಕೆ ಬರುತ್ತವೆ. ಕಾರ್ಯಕ್ಷಮತೆಯೂ ಚೆನ್ನಾಗಿದೆ. ಸುಲಭವಾಗಿ ಅಳವಡಿಸಿ ಮತ್ತು ತೆರವುಗೊಳಿಸಲು ಪೂರಕವಾಗಿವೆ. ಕ್ರಾಪ್ ಕವರ್‌ಗಳು ವಿವಿಧ ಪರಿಸರ ಮತ್ತು ಜೈವಿಕ ಅಪಾಯಗಳಿಂದ ಬೆಳೆಗಳನ್ನು ರಕ್ಷಿಸುತ್ತದೆ. ಮೊಬೈಲ್‌ನಲ್ಲಿ ಗ್ರೋಇಟ್ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿ ಮಾಹಿತಿ ಪಡೆಯ ಬಹುದು. ಅಥವಾ ಭೇಟಿ ನೀಡಿ: https://www.thegrowit.com

**ನೇರವಿಗಾಗಿ ಸಂಪರ್ಕ ಸಂಖ್ಯೆ:** 18008896978, +919316747973

05-11-2022
V-karnataka
Pg 12

# ನೀರಾವರಿ ಬೇಡ, ಬಂದಿದೆ ಸೆನ್ಸಾರ್ ವ್ಯವಸ್ಥೆ

## ಅತಿ ಕಡಿಮೆ ಮಾನವ ಸಂಪನ್ಮೂಲ ಬಳಸಿ ಹೆಚ್ಚು ಇಳುವರಿ ಕೃಷಿ ಪದ್ಧತಿ

■ ರವಿಕುಮಾರ ಬೆಟ್ಟದಪುರ ಬೆಂಗಳೂರು
ravi.kumar6@timesgroup.com

ಹನಿ ನೀರಾವರಿ ಹಾಗೂ ತುಂತುರು ನೀರಾವರಿಯಲ್ಲಿ 'ಸೆನ್ಸಾರ್' ತಂತ್ರಜ್ಞಾನ ಬಂದಿದ್ದು, ರೈತರು ಶೇ.50ರಷ್ಟು ನೀರು ಉಳಿತಾಯ ಮಾಡಬಹುದಾಗಿದೆ.

ಈ ಪದ್ಧತಿಯಿಂದ ಅತಿ ಕಡಿಮೆ ಮಾನವ ಸಂಪನ್ಮೂಲ ಬಳಸಿಕೊಂಡು ಕೃಷಿ ಮಾಡಿ ಹೆಚ್ಚು ಇಳುವರಿ ಪಡೆಯ ಬಹುದು. ಅಲ್ಲದೆ, ಮಿಥೇನ್, ಕಾರ್ಬನ್ ಪ್ರಮಾಣ ಕಡಿಮೆಯಾಗುವು ದರೊಂದಿಗೆ ಪರಿಸರ ಸ್ನೇಹಿಯಾಗಿ ಕೃಷಿ ಮಾಡಬಹುದು.




''ಸೆನ್ಸಾರ್ ಅಳವಡಿಕೆಯಿಂದ ಭೂಮಿಯಲ್ಲಿನ ತೇವಾಂಶದ ಮಾಪನ ಕೂಡಲೇ ತಿಳಿಯುತ್ತದೆ. ಅಲ್ಲದೆ, ಸ್ವಯಂಚಾಲಿತವಾಗಿ ಭೂಮಿಗೆ ಅವಶ್ಯಕತೆ ಇರುವಷ್ಟು ನೀರು ಪೂರೈಕೆಯಾಗುತ್ತದೆ. ಸೆನ್ಸಾರ್ ಪಾಯಿಂಟ್, ಸೊಲೆನೋಯಿಡ್ ವಾಲ್ಸ್ (ವಾಟರ್ ವಾಲ್), ವಾಟರ್ ಮೀಟರ್ ಮತ್ತು ಹಾಗೂ ಮಿಥೇನ್ ಮತ್ತು ಕಾರ್ಬನ್ ಬಿಡುಗಡೆಯಾಗುವ ದತ್ತಾಂಶ ಸಂಗ್ರಹ ಗ್ರೀನ್ ಪ್ರೋಗ್ರಾಮ್ ಬೋರ್ಡ್‌ನಲ್ಲಿ ಕ್ರೋಢೀಕೃತವಾಗಲಿದೆ,'' ಎಂದು ಅಖಿಲ ಭಾರತ ಸುಸಂಘಟಿತ ಕೃಷಿ ಅರಣ್ಯ ಪ್ರಾಯೋಜನೆ ಮತ್ತು ಪ್ರಧಾನ ಅನ್ವೇಷಕ ಡಾ. ಡಿ.ಸಿ. ಹನುಮಂತಪ್ಪ ಮಾಹಿತಿ ನೀಡಿದರು.

ಸಾಮಾನ್ಯವಾಗಿ ಭತ್ತವನ್ನು ನೀರು ನಿಲ್ಲುವ ಗದ್ದೆಗಳಲ್ಲಿ ಬೆಳೆಯಬೇಕು ಎಂಬುದು ವಾಡಿಕೆ. ಆದರೆ, ಇದಕ್ಕೆ ವಿರುದ್ಧವಾಗಿ ನೀರು ನಿಲ್ಲದ ಜಮೀನುಗಳಲ್ಲಿ ಹನಿ ನೀರಾವರಿ ಪದ್ಧತಿ ಮೂಲಕ ಭತ್ತ ಬೆಳೆಯಬಹುದು. ಭತ್ತದ ಬೀಜಗಳನ್ನು (ಜೋಳ, ರಾಗಿಯಂತೆ) ಸಾಲಿನ ಮೂಲಕ ಬಿತ್ತನೆ ಮಾಡಬಹುದು. ಡ್ರಿಪ್ ಪೈಪ್‌ಗಳ ಮೂಲಕ ಹನಿ ನೀರಾವರಿ ಮಾಡಬಹುದು. ಇದರಿಂದ ಒಂದು ಹೆಕ್ಟೇರ್‌ಗೆ 85 ಕ್ವಿಂಟಾಲ್ ಭತ್ತ ಬೆಳೆಯಬಹುದು.




- ಒಂದು ಹೆಕ್ಟೇರ್‌ನಲ್ಲಿ ಸೆನ್ಸಾರ್ ತಂತ್ರಜ್ಞಾನ ಅಳವಡಿಕೆಗೆ 1.5 ಲಕ್ಷ ರೂ. ವೆಚ್ಚ
- ಒಂದು ಸೊಲೆನೋಯಿಡ್ ವಾಲ್‌ನಿಂದ ಅರ್ಧ ಎಕರೆಗೆ ನೀರು ಹರಿಸಬಹುದು.
- ಒಂದು ಸೊಲೆನೋಯಿಡ್ ನಿಂದ 30 ಮೀಟರ್ ಉದ್ದ 25 ರಿಂದ 40 ಮೀಟರ್ ಅಗಲದವರೆಗೆ ಡ್ರಿಪ್ ಅಳವಡಿಸಬಹುದು.

**ಸೆನ್ಸಾರ್ ಪಾಯಿಂಟ್:** ಸೆನ್ಸಾರ್ ಪಾಯಿಂಟ್ ಅನ್ನು 10 ರಿಂದ 12 ಸೆಂ.ಮೀ. ಆಳದಲ್ಲಿ ಅಳವಡಿಸಲಾಗುತ್ತದೆ. ಇದರಿಂದ ಮಣ್ಣಿನ ತೇವಾಂಶದ ಸ್ಥಿತಿಯನ್ನು ಮಣ್ಣಿನ ಆಳ ಮತ್ತು ಹಂತದಲ್ಲಿ ಸೂಚಿಸುತ್ತದೆ. ಮಣ್ಣಿನ ವಿಧಗಳಿಗೆ ಅನುಗುಣವಾಗಿ ನಿಖರವಾದ ತೇವಾಂಶ ಮಾಹಿತಿ ನೀಡುತ್ತದೆ. ಹೆಚ್ಚು ಮತ್ತು ಕಡಿಮೆ ತೇವಾಂಶದ ಸೂಚಕವಿರುತ್ತದೆ. ಮೋಡ ಮುಸುಕಿದ ವಾತಾವರಣ ಇದರಲ್ಲಿ ದತ್ತಾಂಶ ಸಂಗ್ರಹವಾಗಲಿದೆ.

**ಫೀಲ್ಡ್ ಕಂಟ್ರೋಲರ್:** ಸೆನ್ಸಾರ್‌ನಿಂದ ಮಣ್ಣಿನ ತೇವಾಂಶದ ಮಾಹಿತಿಯನ್ನು ಸಂಗ್ರಹಿಸುತ್ತದೆ. ಅದರೊಂದಿಗೆ ನೀರಾವರಿ ಸ್ವಯಂಚಾಲಿತ ಕಾರ್ಯಗತಗೊಳಿಸುತ್ತದೆ.

**ಸೊಲೆನೋಯಿಡ್ ವಾಲ್ಸ್(ನೀರು ಬಿಡುಗಡೆಯ ಪೈಪ್):** ಇದು ಸೌರಶಕ್ತಿ ಹೀರಿಕೊಂಡು ಸಣ್ಣ ಬ್ಯಾಟರಿಯೊಂದಿಗೆ ಕಾರ್ಯನಿರ್ವಹಿಸುತ್ತದೆ. ವಾಲ್ಸ್ ಆನ್ ಹಾಗೂ ಆಫ್ ಸ್ಥಿತಿಯೂ ಮೋಡದಲ್ಲಿ ಕ್ರೋಢೀಕೃತವಾಗಿರುತ್ತದೆ. ನೀರಿನ ಅವಶ್ಯಕತೆ ಇದ್ದಾಗ ಮಾತ್ರ ವಾಲ್ ತೆರೆದುಕೊಳ್ಳುತ್ತದೆ. ಇದನ್ನು ಸ್ವಚ್ಛಗೊಳಿಸುವುದು ಅತಿ ಸುಲಭ. ಅಲ್ಲದೆ, ನೀರಿನ ಹರಿವನ್ನು ಕೈಯಿಂದಲೂ ನಿಯಂತ್ರಿಸಬಹುದು.

**ನೀರು ಅಳತೆ ಮಾಪನ:** ಬ್ಯಾಟರಿಯಿಂದ ಕಾರ್ಯನಿರ್ವಹಿಸುವ ಈ ಮಾಪನ, ಪ್ರತಿ ಕ್ಷೇತ್ರದ ಹರಿವನ್ನು ಅಳತೆ ಮಾಡಲು ಸಹಕಾರಿಯಾಗಿದೆ. ಇದರಿಂದ ಯಾವ ಪ್ರದೇಶಕ್ಕೆ ಎಷ್ಟು ಪ್ರಮಾಣದ ನೀರು ಅವಶ್ಯಕತೆ ಇದೆ ಎಂಬುದು ತಿಳಿಯುತ್ತದೆ.

**ಸ್ಟಾರ್ಟ್ ಪಂಪ್ ಕಂಟ್ರೋಲರ್:** ಈ ಪಂಪ್ ಸಕ್ರಿಯಗೊಳಿಸಿದ ಆಧಾರಿತ ಸ್ವಯಂಚಾಲಿತ ಪಂಪ್ ಆಗಿದೆ. ಇದು ನೀರಿಲ್ಲದ ಸಮಯದಲ್ಲಿ ಪಂಪ್ ರಕ್ಷಣೆ ಮಾಡಬಹುದು. ಪಂಪ್ ಕಾರ್ಯಕ್ಷಮತೆ ಮತ್ತು ಕಾರ್ಯಾಚರಣೆ ವರದಿ ದೊರೆಯಲಿದೆ. ಇದನ್ನು ಮೊಬೈಲ್ ಮತ್ತು ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿಕೊಂಡು ಕುಳಿತಲ್ಲಿಯೇ ನೀರು, ತೇವಾಂಶದ ಬಗ್ಗೆ ವರದಿ ಪಡೆದುಕೊಳ್ಳಬಹುದು. ಇದರಿಂದ ಹನಿ ನೀರಾವರಿ ಪದ್ಧತಿಗಿಂತ ಶೇ. 50ರಷ್ಟು ನೀರು ಉಳಿಸಬಹುದು. ಬೆಳೆಗಳಲ್ಲಿ ಶೇ. 85 ರಷ್ಟು ಪೋಷಕಾಂಶ ಸಮರ್ಥತೆ ಹೆಚ್ಚಲಿದೆ.

05-11-2022
V-karnataka
Pg 04